# ಶ್ರೀ ಗುರುಭ್ಯೋ ನಮಃ
# ಶ್ರೀ ಹರಿಃ ಓಂ

**ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ ।**
ಮತಿ ಪ್ರೇರಿಸುವಳು ಪಾರ್ವತಿದೇವಿ । ಮು ।
ಕುತಿ ಪಥಕೆ ಮನವೀವ ಮಹಾರುದ್ರದೇವರು ।
ಹರಿಭಕುತಿ ದಾಯಕಳು ಭಾರತಿದೇವಿ । ಯು ।
ಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ ।
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು ।
ಗತಿ ಪಾಲಿಸುವವನು ನಮ್ಮ ಪವಮಾನನು ।
ಚಿತ್ತದಲಿ ಆನಂದ ಸುಖವೀವಳು ರಮಾ ।
ಭಕ್ತ ಜನರೊಡೆಯ ನಮ್ಮ **ಪುರಂದರ ವಿಠಲ**ನು ।
ಸತತ ಇವರಲಿ ನಿಂತು ಕೃತಿಯ ನಡೆಸುವನು ।

-- --- ---

**ಗುರುಪರಂಪರಾಸ್ಮರಣೆ**

**ಗುರು ಮಧ್ವ ರಾಯರಿಗೆ ನಮೋ ನಮೋ**
ಗುರು ಮಧ್ವ ಸಂತತಿಗೆ ನಮೋ ನಮೋ

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ
ಗುರು ವಾದಿರಾಜರಿಗೆ ನಮೋ ನಮೋ

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ
ಪುರಂದರದಾಸರಿಗೆ ನಮೋ ನಮೋ

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ
ರಂಗವೊಲಿದದಾಸರಿಗೆ ನಮೋ ನಮೋ

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ ।
ಹುಂಡೇಕಾರ ದಾಸರಿಗೆ ನಮೋ ನಮೋ

**ಗುರುಶ್ರೀಶವಿಠಲನ** ಪರಮಭಕ್ತರಪಾದ
ಸರಸಿಜಯುಗಗಳಿಗೆ ನಮೋ ನಮೋ

--- --- ---

## ಶ್ರೀ ಜಗನ್ನಾಥದಾಸರು

**ಎಂತು ಪೊಗಳಲಿ ಜಗನ್ನಾಥದಾಸರನಾ ।**

ಕಂತುಪಿತ ಒಲಿದಿವರ ಅಂತರಂಗದಿ ಪೊಳೆವ ॥ ಪ ॥

ಶ್ರೀರಮಾದೇವಿ ಪತಿಯೊಡನೆ ಇವರಲಿ ನಿಂತು ।
ಈ ಎರೆಡು ದೇಹ ಅವ್ಯಕ್ತ ಸಹಿತ ॥
ಆರು ನಾಲಕು ತತ್ವಾಭಿಮಾನಿಗಳ ಕೂಡಿ ।
ಮೂರು ಗುಣ ಕಾರ್ಯಗಳ ಮಾಡಿ ತೋರ್ಪಳು ಸುಖವ ॥ ೧ ॥

ಈ ಸುಮನಸರ ಮಹಿಮೆ ಸೂಸಿ ತಾ ತಿಳಿದು ನಿಜ ।
ದಾಸನಾದವನ ಅಘನಾಶನ ॥
ಕಾಸಿನಾಶೆಗೆ ಪರರ ದಾಸನಾದವನು ।
**ಗುರುಶ್ರೀಶವಿಠಲನ** ದಾಸರಾ ಮಹಿಮೆ ಬಲ್ಲನೆ ॥ ೫ ॥

--- --- ---

## ಶ್ರೀ ಗೋಪಾಲದಾಸರು

**ಗೋಪಲದಾಸರಾಯ ನಿನ್ನಯಪಾದ**

ನಾಪೊಂದಿದೆನೋ ನಿಶ್ಚಯ
ಈ ಪೀಡಿಸುವ ತ್ರಯ ತಾಪಗಳೋಡಿಸಿ
ಕೈಪಿಡಿದೆನ್ನನು ನೀ ಪಾಲಿಸನುದಿನ

ಘೊರ ವ್ಯಾಧಿಗಳ ನೋಡಿ ವಿಜಯರಾಯ ಭೂರಿ ಕರುಣವ ಮಾಡಿ ತೋರಿದರಿವರೆ ಉದ್ಧಾರಕರೆಂದದಿ
ನಾರಭ್ಯತವಪಾದ ಸಾರಿದೆ ಸಲಹೆಂದು
ಸೂರಿಜನ ಸಂಪ್ರೀಯ ಸುಗುಣೋದ್ಧಾರ ದುರುಳನ
ದೋಷ ನಿಚಯವ ದೂರಗೈಸೋ ದಯಾಂಬುನಿಧೆ
ನಿವಾರಿಸಿ ಕರಪಿಡಿದು ಬೇಗನೆ

ಅಪಮೃತ್ಯುವಿನ ತರಿದೆ ಎನ್ನೊಳಗಿದ್ದ
ಅಪರಾಧಂಗಳ ಮರೆದೆ
ಚಪಲಚಿತ್ತನಿಗೊಲಿದು ವಿಪುಳಮತಿಯನಿತ್ತು
ನಿಪುಣನೆಂದೆನಿಸಿದೆ ತಪಸಿಗಳಿಂದಲೀ
ಕೃಪಣವತ್ಸಲ ನಿನ್ನ ಕರುಣೆಗೆ ಉಪಮೆಗಾಣೆನೋ
ಸಂತತವು ಕಾಶ್ಯಪಿಯೊಳಗೆ ಬುಧರಿಂದ
ಜಗದಾಧಿಫನ ಕಿಂಕರನೆನಿಸಿ ಮೆರೆದೆ

ಎನ್ನಪಾಲಿಸಿದಂದದಿ ಸಕಲ ಪ್ರಪನ್ನರ
ಸಲಹೋ ಮೋದಿ
ಅನ್ಯರಿಗೀಪರಿ ಬಿನ್ನಪಗೈಯೆ
**ಜಗನ್ನಾಥವಿಠ್ಠಲನ** ಸನ್ನುತಿಸುವ ಧೀರ

ನಿನ್ನ ನಂಬಿದ ಜನರಿಗೀಪರಿ ಬನ್ನವೆ
ಭಕ್ತಾನುಕಂಪಿ ಶರಣ್ಯ ಬಂದೊದಗೀ ಸಮಯದಿ
ಅಹರ್ನಿಶಿ ಧ್ಯಾನಿಪೆನು ನಿನ್ನನು

## ಶ್ರೀ ವಿಜಯದಾಸರು

**ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ**
ದುರಿತ ತರಿದು ಪೊರೆವ ವಿಜಯಗುರುಗಳೆಂಬರ

ದಾಸರಾಯನ ದಯವ ಸೂಸಿ ಪಡೆದನಾ
ದೋಷರಹಿತನಾ ಸಂತೋಷಭರಿತನಾ

ಜ್ಞಾನವಂತನಾ ಬಲುನಿಧಾನಿ ಶಾಂತನಾ
ಮಾನ್ಯವಂತನ ಬಹುವದಾನ್ಯದಾತನ

ಹರಿಯಭಜಿಸುವ ನರಹರಿಯ ಯಜಿಸುವಾ
ದುರಿತತರಿಸುವ ಜನಕೆ ಹರುಷಸುರಿಸುವ

ಮೋದಭರಿತನ ಪಂಚಭೇದವರಿತನ
ಸಾಧುಚರಿತನ ಮನೋವಿಷಾದ ಮರೆತನ

ಇವರ ನಂಬಿದ ಜನಕೆ ಭವವಿದೆಂಬುದು
ಹವಣವಾಗದು ನಮ್ಮವರಮತವಿದು

ಪಾಪಕೋಟಿಯ ರಾಶಿ ಲೇಪವಾಗದು
ತಾಪಕಳೆವನು ಬಲುದಯಾಪಯೋನಿಧಿ

ಕವನ ರೂಪದಿ ಹರಿಯ ಸ್ತವನ ಮಾಡಿದ
ಭುವನಬೇಡಿದ ಮಾಧವನ ನೋಡಿದ

ರಂಗನೆಂದನ ಭವವು ಹಿಂಗಿತೆಂದನಾ
ಮಂಗಳಾಂಗನ ಅಂತರಂಗವರಿತನಾ

ಕಾಶಿನಗರದಲ್ಲಿದ್ದ ವ್ಯಾಸದೇವನ ದಯವ
ಸೂಸಿಪಡೆದನಾ ಉಲ್ಲಾಸಭರಿತನಾ

ಚಿಂತೆಬ್ಯಾಡಿರೋ ನಿಶ್ಚಿಂತರಾಗಿರೋ

ಶಾಂತಗುರುಗಳಾ ಪಾದವಾಂತು ನಂಬಿರೋ

ಖೇದವಾಗದೋ ನಿಮಗೆ ಮೋದವಾಹುದೋ
ಆದಿದೇವನಾ ಸುಪ್ರಸಾದವಾಹುದೋ

ತಾಪತಡೆವನೋ ಬಂದ ಪಾಪಕಡಿವನೋ
ಶ್ರೀಪತೀಶನ ಪದಸಮೀಪವಿಡುವನೋ

ಗಂಗೆಮಿಂದರೆ ಮಲವು ಹಿಂಗಿತಲ್ಲದೇ
ರಂಗನೊಲಿಯನೋ ಭಕ್ತರಸಂಘ ದೊರೆಯದೆ

ವೇದವೋದಲು ಬರಿದೆ ವಾದಮಾಡಲು
ಹಾದಿದೊರೆಯದು ಬುಧರಪಾದ ನಂಬದೆ

ಲೆಖ್ಖವಿಲ್ಲದ ದೇಶ ತುಕ್ಕಿ ಬಂದರೂ
ದು:ಖವಲ್ಲದೆ ಲೇಶ ಭಕ್ತಿ ದೊರಕದು

ದಾನಮಾಡಲು ದಿವ್ಯಗಾನಪಾಡಲು
ಜ್ಞಾನದೊರಯದು ಇವರಧೀನವಾಗದೆ

ನಿಷ್ಠೆಯಾತಕೆ ಕಂಡ ಕಷ್ಟವ್ಯಾತಕೆ
ದಿಟ್ಟಗುರುಗಳ ಪಾದ ಮುಟ್ಟಿ ಭಜಿಸಿರೊ

ಪೂಜೆಮಾಡಲು ಕಂಡ ಗೋಜುಬೀಳಲು
ಬೀಜಮಾತಿನ ಫಲ ಸಹಜ ದೊರಕದು

ಸುರರು ಎಲ್ಲರು ಇವರ ಕರವ ಪಿಡಿವರೋ
ತರಳರಂದದಿ ಹಿಂದೆ ತಿರುಗುತಿಪ್ಪರು

ಗ್ರಹಗಳೆಲ್ಲವು ಇವರ್ಗೆ ಸಹಾಯ ಮಾಡುತ
ಅಹೋರಾತ್ರಿಲಿ ಸುಖದ ನಿವಹ ಕೊಡುವವು

ವ್ಯಾಧಿಬಾರದೋ ದೇಹಬಾಧೆ ತಟ್ಟದೋ
ಆದಿದೇವನ ಸುಪ್ರಸಾದವಾಹುದೋ

ಪತಿತಪಾಮರ ಮಂದಮತಿಯು ನಾ ಬಲು
ತುತಿಸಲಾಪನೇ ಇವರ ಅತಿಶಯಂಗಳ

ಕರುಣದಿಂದಲಿ ಎಮ್ಮ ಪೊರೆವನಲ್ಲದೆ
ದುರಿತಕೋಟಿಯ ಬೇಗ ತರಿವ ದಯದಲಿ

ಮಂದಮತಿಗಳು ಇವರ ಚಂದವರಿಯದೆ
ನಿಂದಿಸುವರು ಭವದ ಬಂಧ ತಪ್ಪದು

ಇಂದಿರಾಪತಿ ಇವರ ಮುಂದೆಕುಣಿವನು
ಅಂದವಚನವ ನಿಜಕೆ ತಂದುತೋರ್ಪನು

ಉದಯಕಾಲದಿ ಈ ಪದವ ಪಠಿಸಲು
ಮದಡನಾದರು ಜ್ಞಾನ ಉದಯವಾಹುದು

ಸಟೆಯಿದಲ್ಲವೋ **ವ್ಯಾಸವಿಠಲ** ಬಲ್ಲನೋ
ಪಠಿಸಬಹುದಿದು ಕೇಳಿ ಕುಟಿಲರಹಿತರು

## ಶ್ರೀ ಪುರಂದರದಾಸರು

**ದಾಸರೆಂದರೆ ಪುರಂದರ ದಾಸರಯ್ಯ**
ವಾಸುದೇವ ಕೃಷ್ಣನ್ನ ಸೂಸಿಪೂಜಿಸುವಂಥ

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳಪೊಕ್ಕು
ದಾಸನೆಂದು ತುಳಸಿ ಮಾಲೆ ಧರಿಸಿ
ಬ್ಯಾಸರಿಲ್ಲದೆ ಅವರ ಕಾಡಿಬೇಡಿಬಳಲಿಸುತ
ಕಾಸುಗೊಳಿಸುವ ಪುರುಷ ಹರಿದಾಸನೇ

ಢಂಬಕದಿ ಹರಿಸ್ಮರಣೆ ಮಾಡಿ ಜನರಾ ಮುಂದೆ
ಸಂಭ್ರಮದಿ ತಾನುಂಬೋ ಊಟಬಯಸಿ
ಅಂಬುಜೋದ್ಭವಪಿತನ ಆಗಮಗಳರಿಯದಲೆ
ತಂಬೂರಿ ಮೀಟಲವ ಹರಿದಾಸನೇ

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯಿಸಂಸಾರದಲಿ ಮಮತೆಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ

ಪಾತಕಾರನಂತೆ ಪದಗಳನೆ ಪೇಳುತ್ತ
ಕೂಟ ಜನರ ಮನವ ಸಂತೋಷಗೊಳಿಸಿ
ಗೂಟನಾಮಗಳಚ್ಚಿಕೊಂಡಿರಿಯ ತಾನೆನಿಸಿ
ತೂಟಕವ ಮಾಡಲವ ಹರಿದಾಸನೇ

ನೀತಿಯಲ್ಲವನರಿತು ನಿಗಮ ವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲಿ
ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರಿವರಯ್ಯಾ

--- --- --

**ಗುರು ಪುರಂದರದಾಸರೇ ನಿಮ್ಮ**
**ಚರಣಕಮಲವ ನಂಬಿದೆ**

ಗರುವ ರಹಿತನ ಮಾಡಿ ಎನ್ನನು
ಪೊರೆವ ಭಾರವು ನಿಮ್ಮದೆ

ಒಂದು ಅರಿಯದ ಮಂದಮತಿ ನಾ
ಇಂದು ನಿಮ್ಮನು ವಂದಿಪೆ
ಇಂದಿರೇಶನ ಪಾದ ತೋರಿಸೋ
ತಂದೆ ಮಾಡೆಲೊ ಸತ್ಕೃಪೆ

ಮಾರಜನಕನ ಸನ್ನಿಧಾನದಿ
ಸಾರಗಾಯನ ಮಾಡುವ
ನಾರದಾದಿ ರೂಪದಿಂದಲಿ
ತೋರುದರ್ಶನ ತೋರಿದೆ

ಪುರಂದರಾಲಯ ಘಟ್ಟದೊಳು
ನೀ ನಿರುತ ಧನವಗಳಿಸಲು
ಪರಮ ಪುರುಷನು ವಿಪ್ರನಂದದಿ
ಕರವ ನೀಡಿ ಯಾಚಿಸೆ

ಪರಮ ನಿರ್ಗುಣ ಮನವನರಿತು
ಸರುವ ಸೋರೆಯ ಗಳಿಸಿದ
ಅರಿತು ಮನದಲಿ ಜರಿದು ಭವಗಳ
ತರುಣಿಸಹ ಹೊರಟೆಯಾ

ಅಜಭವಾದಿಗಳರಸನಾದ
**ವಿಜಯವಿಠಲ**ನ ಧ್ಯಾನಿಪ
ನಿಜಸುಜ್ಞಾನವ ಕೊಡಿಸಬೇಕೆಂದು
ಭಜಿಪೆನೋ ಕೇಳ್ ಗುರುವರ

––– ––– –– –

## ಶ್ರೀ ರಾಘವೇಂದ್ರಗುರುಸಾರ್ವಭೌಮರು

**ಬಾರೋ ಗುರುರಾಘವೇಂದ್ರ**
ಬಾರಯ್ಯ ಬಾ ಬಾ

ಹಿಂದುಮುಂದಿಲ್ಲೆನಗೆ ನೀ ಗತಿ
ಎಂದುನಂಬಿದೆ ನಿನ್ನ ಪಾದವ
ಬಂಧನವ ಬಿಡಿಸೆನ್ನ ಕರಪಿಡಿ
ನಂದಕಂದ ಮುಕುಂದ ಬಂಧೋ

ಸೇವಕನೆಲೋ ನಾನು  ಧಾವಿಸಿಬಂದೆನು
ಸೇವೆಯ ನೀಡೆಲೋ ನೀನು
ಸೇವಕನ ಸೇವೆಯನು ಸೇವಿಸಿ
ಸೇವ್ಯಸೇವಕ ಭಾವವೀಯುತ
ತಾವುಗಾಣಿಸಿ ಪೊರೆಯೋ ಧರೆಯೊಳು
ಪಾವನಾತ್ಮಕ ಕಾವಕರುಣಿ

ಕರೆದರೆ ಬರುವೀಯೆಂದು  ಸಾರುವುದು ಡಂಗುರ
ತ್ವರಿತದಿ ಒದಗೊಬಂದು
ಜರಿಯಬೇಡವೋ ಬರಿದೆ ನಿನ್ನಯ
ವಿರಹತಾಳದೆ ಮನದಿ ಕೊರಗುವೆ
ಹರಿಯಸ್ಮರಣೆಯ ನಿರುತದಲಿ
ಎನಗ್ಹರುಷದಲಿ ನೀ ನಿರುತ ಕೊಡುತಲಿ

ನರಹರಿಪ್ರಿಯನೇ ಬಾರೋ **ಗುರುಶ್ರೀಶವಿಠಲನ**
ಕರುಣಾಪಾತ್ರನೇ ಬೇಗ ಬಾ
ಗುರುವರನೆ ಪರಿಪೋಷಿಸೆನ್ನನು
ಮರೆಯದಲೆ ತವ ಚರಣಕೋಟಿಯಲಿರಿಸಿ
ಚರಣಾಂಬುಜವ ತೋರುತ
ತ್ವರಿತದಲಿ ಓಡೋಡಿ ಬಾ ಬಾ

--- --- ---

**ಕೋರಿ ಕರೆವೆ ಗುರು ಶ್ರೀ ರಾಘವೇಂದ್ರನೆ**

ಬಾರೋ ಮಹಾಪ್ರಭುವೇ
ಚಾರು ಚರಣ ಯುಗ ಸಾರಿ ನಮಿಪೆ
ಬೇಗ ಬಾರೊ ಹೃದಯ
ಸುಖ ಸಾರ ರೂಪವ ತೋರೋ

ಎಲ್ಲಿ ನೋಡಲು ಹರಿ ಅಲ್ಲೆ ಕಾಣುವನೆಂದು
ಕ್ಷುಲ್ಲ ಕಂಬವನೋಡೆದು
ನಿಲ್ಲದೆ ನರಹರಿ ಚೆಲ್ವಿಕೆ ತೋರಿದ
ಫುಲ್ಲಲೋಚನ ಶಿಶು ಪ್ರಲ್ಹಾದನಾಗಿ ಬಾರೋ

ದೊಷ ಕಳೆದು ಸಿಂಹಾಸನವೇರಿದ
ದಾಸ ಕುಲವ ಪೊರೆದ
ಶ್ರೀಶನರ್ಚಕನಾಗಿ ಪೋಷಿಸಿ ಹರಿ ಮತ
ವ್ಯಾಸ ತ್ರಯವ ಗೈದ ವೇಷ ತಳೆದು ಬಾರೋ

ಮೂರ್ಜಗ ಮಾನಿತ ತೇಜೋ ವಿರಾಜಿತ
ಮಾಸದ ಮಹಾ ಮಹಿಮ
ಓಜೆಗೊಳಿಸಿ ಮತಿ ರಾಜೀವ ಭೋದದಿ

ಪೂಜೆಗೊಂಬುವ ಗುರು ರಾಜ ರೂಪದಿ ಬಾರೋ

ಮಂತ್ರ ಸದನೊದೊಳು ಸಂತ ಸುಜನರಿಗೆ
ಸಂತೊಷ ಸಿರಿ ಗೆರೆದು ಕಂತು ಪಿತನ ಪಾದ
ಸಂತತ ಸೇವಿಪ ಶಾಂತ ಮೂರುತಿ
ಎನ್ನಂತರಂಗದಿ ಬಾರೋ

ಈ ಸಮಯದಿ ನನ್ನಾಸೆ ನಿನ್ನೊಳು
ಬಲು ಸೂಸಿ ಹರಿಯುತಿಹುದು
ಕೂಸಿಗೆ ಜನನಿ ನಿರಾಸೆಗೊಳಿಸುವಳೇ
ದೊಷ ಕಳೆದು **ವಿಠಲೇಶ** ಹೃದಯ ಬಾರೋ

**ರಾಯ ಬಾರೋ ತಂದೆ ತಾಯಿ ಬಾರೋ ।**
**ನಮ್ಮನ್ ಕಾಯ ಬಾರೋ ।**
ಮಾಯಿಗಳ ಮರ್ದಿಸಿದ ರಾಘವೇಂದ್ರ, ರಾಯ ಬಾರೋ ॥

ವಂದಿಪ ಜನರಿಗೆ, ಮಂದಾರ ತರುವಂತೆ ।
ಕುಂದದಭೀಷ್ಟವ ಸಲಿಸುತಿರ್ಪ ।  ರಾಯ ಬಾರೋ
ಕುಂದದಭೀಷ್ಟವ ಸಲಿಸುತಿರ್ಪ ಸರ್ವಜ್ಞ ।
ಮಂದನ ಮತಿಗೆ ರಾಘವೇಂದ್ರ , ರಾಯ ಬಾರೋ ॥

ಆರ್ಮೂರು ಏಳು ನಾಲ್ಕು ಎಂಟು ಗ್ರಂಥ । ಸಾರಾರ್ಥ
ತೋರಿದಿ ಸರ್ವರಿಗೆ ನ್ಯಾಯದಿಂದ । ರಾಯ ಬಾರೋ
ತೊರಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ ।
ಸೂರಿಗಳರಸನೆ ರಾಘವೇಂದ್ರ , ರಾಯ ಬಾರೋ ॥

ರಾಮಪದಾಬ್ಜ ಸತತ ಭೃಂಗ ಕೃಪಾಂಗ ।
ಭ್ರಾಮಕ ಜನರ ಮಾನಭಂಗ । ರಾಯ ಬಾರೋ
ಭ್ರಾಮಕ ಜನರ ಮಾನಭಂಗ ಮಾಡಿದ
ಧೀಮಂತರೊಡೆಯ ರಾಘವೇಂದ್ರ , ರಾಯ ಬಾರೋ ॥

ಭಾಸುರ ಚರಿತನೆ ಭೂಸುರ ವಂದ್ಯನೆ ।
ಶ್ರೀ ಸುಧೀಂದ್ರಾರ್ಯರ ವರಪುತ್ರಾ । ರಾಯ ಬಾರೋ
ಶ್ರೀ ಸುಧೀಂದ್ರಾರ್ಯರ ವರಪುತ್ರಾ ನೆನಿಸಿದೆ
ದೈಶಿಕರೊಡೆಯ ರಾಘವೇಂದ್ರ , ರಾಯ ಬಾರೋ ॥

ಭೂತಳನಾಥನ ಭೀತಿಯ ಬಿಡಿಸಿದೆ
ಪ್ರೇತತ್ವ ಕಳೆದ ಮಹಿಷೀಯಾ । ರಾಯ ಬಾರೋ
ಪ್ರೇತತ್ವ ಕಳೆದ ಮಹಿಷೀಯಾ । ಮಹ ಮಹಿಮ
**ಜಗನ್ನಾಥ ವಿಠಲನ** ಪ್ರೀತಿ ಪಾತ್ರಾ ॥ ರಾಯ ಬಾರೋ

--- --- ---

**ಬಂದಾನೋ ರಾಘವೇಂದ್ರ ಇಂದಿಲ್ಲಿಗೆ**

ಕಂದನ ಮೊರೆ ಕೇಳಿ ಜನನಿಯು ಬರುವಂತೆ

ಗಜವೇರಿ ಬಂದ ಜಗದಿತಾನಿಂದಾ ।
ಅಜಪಿತರಾಮನ ಪಾದಾಬ್ಜ ಸ್ಮರಿಸುತಲಿ

ಹರಿಯ ಕುಣಿಸುತ ಬಂದಾ ನರಹರಿ ಪ್ರಿಯ ಬಂದ ।
ಶರಣಾಗತರನು ಕರವ ಪಿಡಿವೆನೆಂದು

ಪ್ರಲ್ಹಾದ ವ್ಯಾಸ ಮುನೀಂದ್ರ ರಾಘವೇಂದ್ರ ।
ನಿಲ್ಲಿಸುತ ಮನವ **ಮಧ್ವೇಶ ವಿಠಲ**ನಲ್ಲಿ ॥

--------

**ರಾಘವೇಂದ್ರ ಗುರುರಾಯರ ಸೇವಿಸಿರೋ ।**

ಸೌಖ್ಯದಿ ಜೀವಿಸಿರೋ ॥ ಪಲ್ಲ॥
ತುಂಗಾತೀರದಿ ರಘುರಾಮನ ಪೂಜಿಪರೋ ।
ನರಸಿಂಗನ ಭಜಕರೋ ॥ ಅನು॥

ಶ್ರೀ ಸುಧೀಂದ್ರ ಕರ ಸರೋಜ ಸಂಜಾತ ।
ಜಗದೊಳಗೆ ಪುನೀತ
ದಾಶರಥಿಯ ದಾಸತ್ವವ ತಾನ್ವಹಿಸಿ ।
ದುರ್ಮತಗಳ ಜಯಿಸಿ

ಈ ಸಮೀರ ಮತ ಸಂಸ್ಥಾಪಕರಾಗಿ ।
ನಿಂದಕರನು ನೀಗಿ
ಭೂಸುರರಿಗೆ ಸಂಸೇವ್ಯ ಸದಾ ಚರಣಿ ।
ಕಂಗೊಳಿಸುವ ಕರುಣಿ

ಕುಂದದೆ ವರ ಮಂತ್ರಾಲಯದಲ್ಲಿರುವ ।
ಕರೆದಲ್ಲಿಗೆ ಬರುವ
ಬೃಂದಾವನಗತ ಮೃತ್ತಿಕೆ ಜಲಪಾನ ।
ಮುಕ್ತಿಗೆ ಸೋಪಾನ

ಸಂದರ್ಶನ ಮಾತ್ರದಲಿ ಮಹಾಪಾಪ ।
ಬಡಿದೊಡಿಸಲಾಪ
ಮಂದಭಾಗ್ಯರಿಗೆ ದೊರಕದಿವರ ಸೇವಾ ।
ಶರಣರ ಸಂಜೀವ

**ಶ್ರೀಧರ ವಿಠಲನ** ಸನ್ನಿಧಾನಪಾತ್ರ ।
ಸಂಸ್ತುತಿಸುವ ಮಾತ್ರ

ಮೋದಪಡಿಸುತಿಹ ತಾನಿಹಪರದಲ್ಲಿ ।
ಈತಗೆ ಸರಿಯೆಲ್ಲಿ

ಮೇದಿನಿಯೊಳಗಿನ್ನರಸರು ನಾ ಕಾಣೆ ।
ಪುಸಿಯೆಲ್ಲನ್ನಾಣೆ
ಪಾದಸ್ಮರಣೆಯ ಮಾಡದವನೆ ಪಾಪಿ ।
ನಾ ಪೇಳುವೆ ಸ್ಥಾಪಿ

--- --- ---

**ರಥವನೇರಿದ ರಾಘವೇಂದ್ರ ರಾಯಾ...**

ಗುಣಸಾಂದ್ರಾ ॥ಪ॥
ಸತತ ಮಾರ್ಗದಿ ಸಂತತ ಸೇವಿಪರಿಗೆ ।
ಅತಿ ಹಿತದಲಿ ಮನೋರಥವ ನೀಡುವೆ ನೆಂದು ॥ಅಪ॥

ಚತುರ ದಿಕ್ಕು ದಿಕ್ಕುಗಳಲ್ಲಿ, ಅರಿಪ ಜನರಲ್ಲಿ ।
ಮಿತಿಯಿಲ್ಲದೆ ಬಂದು ಓಲೈಸುತಲಿ, ವರಗಳ ಬೇಡುತಲಿ ॥
ನುತಿಸುತ ಪರಿಪರಿ ನತರಾಗಿಹರಿಗೆ ।
ಗತಿಪೇಳದೆ ಸರ್ವಥಾ ಬಿಡೆನೆಂದು

ಅತುಲಮಹಿಮಾ ನೀಯಾ ದಿನದಲ್ಲಿ ದಿತಿಜ ವಂಶದಲಿ
ಉತಪತ್ತಿಯಾಗಿ ಉಚಿತದಲಿ ಉತ್ತಮಮತಿಯಲ್ಲಿ ॥
ಅತಿಶಯವಿರುತಿರೆ ಪಿತನಭಾಧೆಗೆ ಮನ್ ।
ಮಥಪಿತನೊಲಿಸಿದೆ ಜಿತಕರಣದಲಿ

ಪ್ರಥಮ ಪ್ರಹ್ಲಾದ ವ್ಯಾಸ ಮುನಿಯೆ, ಯತಿ ರಾಘವೇಂದ್ರ ।
ಪ್ರತಿವಾದಿ ಕದಳಿವನ ಕರಿಯೇ ಕರಮುಗಿವೆನು ದೊರೆಯೇ ॥
ಕ್ಷಿತಿಯೊಳು **ಗೋಪಾಲ ವಿಠಲನ** ಸ್ಮರಿಸುತ
ಪ್ರತಿ ಮಂತ್ರಾಲಯದೊಳು ಅತಿ ಮೆರೆವೆ

--- --- ---

**ರೋಗಹರನೆ । ಕೃಪಾಸಾಗರ**

ಶ್ರೀ ಗುರು ರಾಘವೇಂದ್ರ ಪರಿಪಾಲಿಸೋ ॥ಪ॥

ಸಂತತ ದುರ್ಮತ ಧ್ವಾಂತ ದಿವಾಕರ
ಸಂತ ವಿನುತ ಮಾತಲಾಲಿಸೊ ॥

ಪಾವನ ಗಾತ್ರ ! ಸುದೇವ ವರನೆ !
ತವ ಸೇವಕ ಜನರೊಳಗಾಡಿಸೋ ॥

ಘನ್ನ ಮಹಿಮ **ಜಗನ್ನಾಥವಿಠ್ಠಲ** ಪ್ರಿಯ
ನಿನ್ನಾರಾಧನೆ ಮಾಡಿಸೋ ।

--- --- ---

**ಪೊಂದಿ ಬದುಕಿರೋ ರಾಘವೇಂದ್ರ ರಾಯರ**
ಕುಂದದೆಮ್ಮನು ಕರುಣದಿಂದ ಪೊರೆವರ

ನಂಬಿ ಸ್ತುತಿಸುವ ಜನಕದಂಬ ಕಿಷ್ಟವ
ತುಂಬಿ ಕೊಡುವರು ಅನ್ಯರ ಹಂಬಲೀಯರು

ಹಲವ ಭೊಧರ ಸುಮತಿ ಜಲಧಿ ಚಂದಿರ
ಒಲಿದು ಭಕ್ತರ ಕಾಯ್ವ ಸುಲಭ ಸುಂದರ

ಗುರು ಸುದೀಂದ್ರರ ವಿಮಲ ಕರಜರೆನಿಪರ
ಸ್ಮರಿಸಿ ಸುರುಚಿರ ವಿಮಲ ಚರಣ ಪುಷ್ಕರ

ಹಾಲಲೋಚನ ವಿನುತ ಮೂಲ ರಾಮನ
ಶೀಲ ಸದ್ಗುಣ ನೆನೆವ ಶೀಲನನುದಿನ

ಭೂತ ಭಾವನ **ಜಗನ್ನಾಥ ವಿಠಲನ**
ಪ್ರೀತಿ ಪಾತ್ರರ ನಂಬಿರೀತನನುದಿನ

--- --- ---

**ತೂಗಿರೆ ರಾಯರ ತೂಗಿರೆ ಗುರುಗಳ**
ತೂಗಿರೆ ಯತಿಕುಲ ತಿಲಕರ
ತೂಗಿರೆ ಯೋಗಿಂದ್ರ ಕರ ಕಮಲ ಪೂಜ್ಯರ
ತೂಗಿರೆ ಗುರು ರಾಘವೇಂದ್ರರ

ಕುಂದನ ಮಯವಾದ ಚಂದದ ತೊಟ್ಟಿಲೊಳ್
ಆನಂದದಿ ಮಲಗ್ಯಾರೆ ತೂಗಿರೆ
ನಂದನ ಕಂದ ಗೋವಿಂದ ಮುಕುಂದನ
ಚೆಂದಾದಿ ಭಜಿಪರ ತೂಗಿರೆ

ಯೋಗ ನಿದ್ರೆಯನು ಬೇಗನೆ ಮಾಡುವ
ಯೋಗೀಶ ವಂದ್ಯರ ತೂಗಿರೆ
ಭೋಗೀಶಯನನ ಪಾದ
ಮೋದದಿ ಭಜಿಪರ ಭಾಗವತಾರನ್ನ ತೂಗಿರೆ

ಅದ್ವೈತ ಮತದ ವಿಧ್ವಂಸದ ನಿಜ ಗುರು
ಮಧ್ವ ಮತೋಧ್ಧಾರನ್ ತೂಗಿರೆ

ಶುದ್ದ ಸಂಕಲ್ಪದಿ ಬುದ್ದ ನಿಜ ಭಕ್ತರ
ಉಧ್ದಾರ ಮಾಳ್ಪರನ್ ತೂಗಿರೆ

ಭಜಕ ಜನರು ತಮ್ಮ ಭಜನೆಯ ಮಾಡುಲು
ನಿಜ ಗತಿ ಇಬ್ಬರ ತೂಗಿರೆ
ನಿಜ ಗುರು **ಜಗನ್ನಾಥ ವಿಠಲನ** ಪಾದವ
ಭಜನೆಯ ಮಾಳ್ಪರನ್ ತೂಗಿರೆ

--- --- ---

**ಕರೆದರೆ ಬರಬಾರದೆ ರಾಘವೇಂದ್ರ**
(ಗುರುರಾಯ) ॥ ಪ ॥

ವರ ಮಂತ್ರಾಲಯ ಪುರ ಮಂದಿರ ತವ ।
ಚರಣ ಸೇವಕರು ಕರವ ಮುಗಿದು ॥ ೧ ॥

ಹರಿದಾಸರು ಸುಸ್ವರ ಸಮ್ಮೇಳದಿ ।
ಪರವಶದಲಿ ಬಾಯಿ ತೆರೆದು ಕೂಗಿ ॥ ೨ ॥

ಪೂಶರ ಪಿತ **ಕಮಲೇಶ ವಿಠಲನ** ।
ದಾಸಾಗ್ರೇಸರ ಈ ಸಮಯದಿ ॥ ೩ ॥

--- --- --

**ಶ್ರೀ ವಾದಿರಾಜರು**

**ವಾಜಿವದನಾರ್ಚಕ ಶ್ರೀ ವಾದಿರಾಜ ।**
ರಾಜೀವ ನಯನ ಶ್ರೀ ಕೃಷ್ಣನಲಿ ಬಿಡು ಎನ್ನಾ ।

ದೇವ ದೇವೇಶನ ಪರಮ ವೊಲುಮೆಗೆ ಪಾತ್ರ ।
ಪಾವನ್ನ ತವಚರ್ಯ ಪತಿತ ಪಾಲ ।
ಸಾವಧಾನದಿ ಎನ್ನ ಆದಿ ರೋಗವ ನಳಿದು ।
ಕೇವಲ ಸದ್ಭಕ್ತಿ ಶೀಲನ ಮಾಡಯ್ಯ ॥

ಭಾರತಿ ಪತಿ ಪದವ ನೈದುವ ಮಹಾತ್ಮ ।
ಮಾರಾರಿ ಸುರ ಪೂಜ್ಯ ಕರುಣಿ ಕಾಯೋ ।
ಸಾರಿದೆನೋ ತ್ವಚ್ಚರಣ ಸರಸಿಜ ಯುಗ್ಮಂಗಳ ।
ದೂರ ಮಾಡದೆ ಹರಿಯ ಕರುಣ ಪಾತ್ರನ ಮಾಡೋ ॥

ಪರಮ ಭಾಗವತ ಶಿರೋರತ್ನರಿಂದರ್ಚಿತನೆ ।
ಸಿರಿ ವೇಣು ಗೋಪಾಲ ವೇದ ವೇದ್ಯ ।
**ಜಯೇಶ ವಿಠಲನ** ಮನದಲ್ಲಿ ಬಿಡದಿಪ್ಪ ।

ಕೃಪೆ ಬೇಡುವೆನು ಕರುಣಾಬ್ಧಿ ಕೃಪೆಮಾಡು ॥

-------

**ಕಂಡೆ ಕಂಡೆ ರಾಜರ ಕಂಡೆ ಕಂಡೆ**

ಕಂಡೆ ಕಂಡೆನು ಕರುಣ ನಿಧಿಯನು
ಕರಗಳಂಜಲಿ ಮಾಡಿ ಮುಗಿವೆನು
ಲಂಡ ಮಾಯಿಗಳ ಗುಂಡಿ ಒಡೆಯಲು-
ದ್ದಂಡ ಮಾರುತಿ ಪದಕೆ ಬರುವನ

ಪಂಚ ವೃಂದಾವನದಿ ಮೆರೆಯುವ
ಪಂಚ ಬಾಣನ ಪಿತನ ಸ್ಮರಿಸುವ
ಪಂಚ ನಂದನ ಮುಂದೆ ಆಗುತ
ಮಿಂಚಿನಂದದಿ ಪೊಳೆವ ಮಹಿಮನ

ಪಂಚ ಪಾತಕ ಕಳೆವ ದೇವನ
ಪಂಕಜಾರಿ ನಿಭೇಂದುವಕ್ತ್ರನ । ಆ
ಶಂಕ ವಿಲ್ಲದೆ ಭಜಿಪ ಸುಜನರ
ಶಂಕೆ ಬಿಡಿಸುವ ಶಂಕರೇಶನ

ಭಜಿಸುವರಿಗೆ ಭಾಗ್ಯ ಕೊಡುವನ
ಋಜುಗಣೇಶಮರೇಂದ್ರ ವಂದಿತ
ನಿಜ **ಪುರಂದರ ವಿಠಲೇಶನ**
ಭಜನೆ ಮಾಡುವ ಭಾವಿ ಮರುತನ

-------

**ವಾದಿರಾಜ ಮುನಿಪಾ ಹಯಮುಖ-**

ಪಾದ ಕಮಲ ಮಧುಪಾ ॥ ಪ ॥

ನೀ ದಯದಲಿ ತವ ಪಾದಧ್ಯಾನವನು ।
ಆದರದಲಿ ಕೊಟ್ಟಾದರಿಸೆನ್ನನು ॥ ಅ ಪ ॥

ಮೂಷಕ ಬಿಲದಿಂದಾ, ಉದರ ಪೋಷಕೆ ಬರಲಂದು ।
ವಾಸುಕಿಭಯದಿ ನಮ್ಮಾಸನದೆಡೆ ಬರೆ ಕ್ಲೇಶಕಳೆದು ಸಂತೋಷವಗೈಸಿದೆ ॥ ೧ ॥

ಮುಂದೆ ಭೂತವರನಾ, ಪ್ರೇರಿಸೆ ಹಿಂದೆ ಒಬ್ಬವರನಾ ।
ನಿಂದರಿಸ್ಯತಿ ಆನಂದದಿಂದ ಜನವೃಂದ ನೋಡುತಿರೆ ಅಂದಣನಡಿಸಿದ್ಯೊ ॥ ೨ ॥

ಶಾಸ್ತ್ರ ಪ್ರಸಂಗದಲಿ ನಾರಾಯಣ ಭೂತನ ಗೆಲಿದಿಲ್ಲಿ ।
ಖ್ಯಾತಿಯಿಂದ ಬಹುಮಾತನಾಡಿ ಶ್ರೀನಾಥನಮಂದಿರ ಪ್ರೀತಿಲಿತರಿಸಿದ್ಯೊ ॥ ೩ ॥

ತುರಗವದನ ಪಾದಾ ಭುಜದಲಿ ಧರಿಸಿಕೊಂಡ ಮೋದ ॥

ವರಕಡಲೆಯ ಮಡ್ಡಿಯನು ಕರದಿಂದ ಧರಿಸಿ ಉಣಿಸಿದೆ
ಗುರುವರ ಶುಭಕರ ॥ ೪ ॥

ಆ ಮಹಾ**ಗೋಪಾಲ ವಿಠಲನ** ಪ್ರೇಮಪೂರ್ಣಪಾತ್ರ ।
ಧೀಮಂತರಿಗೆ ಸುಕಾಮಿತಾರ್ಥಗಳ ನೇಮದಿಂದೀಯುವ ಪಾವನಚರಿತಾರ್ಥ ॥ ೫ ॥

-------

## ಶ್ರೀ ವ್ಯಾಸರಾಜರು

**ಗುರು ವ್ಯಾಸರಾಯಾ ಪಾಲಿಸೋ । ಮೊರೆಹೊಕ್ಕೆ ನಿನ್ನ ।**
ಶರಣೆನ್ನ ಮಾತು ಲಾಲಿಸೋ ॥ಪ॥
ಕರುಣಾಕರ ಭವ ಕರಿಕರಗಾರದೆ । ಕರವ ಪಿಡಿದು ।
ಪೊರೆ ಎಂದು ನಿನ್ನ ನಾ । ಕರೆವೆ । ಬಾಯ್ದೆರೆವೆ ।
ಆಲ್ಪರಿವೆ । ನತಜನಸುರತರುವೆ ॥ಅಪ॥

ಮಧ್ವಮುನಿ ಸುಮತೋದ್ಧಾರಕ । ಯತಿಕುಲ ತಿಲಕ ।
ಅದ್ವೈತಾರಣ್ಯ ಪಾವಕ ॥
ವಿದ್ವದ್ ಜನತತಿ । ಸದ್ವಿನುತನ ಪಾದ । ಪದ್ಮಕೆ ನಮಿಸುವೆ
ಶುದ್ಧ ಸುಜ್ಞಾನವ ನೀಡೋ । ಅಘದೂಡೋ ।
ಕೃಪೆಮಾಡೋ ಸುತನೆಂದು ನೋಡೋ ॥೧॥

ವಿರಚಿಸಿ ಗ್ರಂಥತ್ರಯವ । ಬೋಧಿಸಿ ಭೇದ ।
ಪೊರೆದಿ ದ್ವಿಜ ಪರಿವಾರವ ॥
ನೆರೆ ನಂಬಿದ ಭೂವರಗೆ ಧಾವಿಸುತ ।
ಭರದಿ ಬರುವ ಕುಹಯೋಗ ಕಂಟಕವ । ದಯದಿ । ನೀ ।
ತರದಿ ಸುಖಿಗರದಿ । ಧಾರುಣಿಯೊಳು ಮೆರದಿ ॥೨॥

ವಂದಿಪೆ ಸುಗತಿದಾಯಕ । ಶ್ರೀವರ ಶ್ಯಾಮ
ಸುಂದರ ಕೃಷ್ಣೋಪಾಸಕ ॥
ತಂದೆಯೆಂದು ನಿನ್ನ ಪೊಂದಿ ಪ್ರಾರ್ಥಿಸುವೆ ।
ಬಂದು ಪೊರೆಯೋ ಪುರಂದರ ದಾಸರ ಪ್ರಿಯ ।
ಕವಿಗೇಯಾ । ಶುಭಕಾಯಾ । ಕರುಣದಿ ಪಿಡಿಕೈಯಾ ॥೩॥

## ಶ್ರೀ ಶ್ರೀಪಾದರಾಜರು

**ಮಹಿಮೆ ಸಾಲದೆ । ಇಷ್ಟೇ ಮಹಿಮೆ ಸಾಲದೇ**
ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಯರು ॥ಅಪ॥

ಮುತ್ತಿನ ಕವಚ ಮೇಲ್ ಕುಲಾಯಿ ।
ರತ್ನ ಕೆಚ್ಚಿದ ಕರ್ಣ ಕುಂಡಲ ॥
ಕಸ್ತುರಿ ತಿಲಕ ಶ್ರೀಗಂಧಲೇಪನ ।
ವಿಸ್ತಾರದಿಂದ ಮೆರೆದು ಬರುವ ॥೧॥

ವಿಪ್ರಗೆ ಬ್ರಹ್ಮಹತ್ಯದೋಷ ಬರಲು ।
ಕ್ಷಿಪ್ರ ಶಂಖೋದಕದಿ ಕಳೆಯೆ ॥
ಅಪ್ರಬುದ್ದರು ದೂಷಿಸೆಗೇರೆಣ್ಣೆ ।
ಕಪ್ಪುವಸನ ಶುಭ್ರಮಾಡಿದ ॥೨॥

ಹರಿಗೆ ಸಮರ್ಪಿಸಿದ ನಾನಾ ಪರಿಯ ।
ಶಾಕಂಗಳನು ಭುಂಜಿಸೆ ॥
ನರರು ನಗಲು ಶ್ರೀಕೃಷ್ಣನ ।
ಕರುಣದಿಂದ ಹಸಿಯ ಮಾಡಿದ ॥೩॥

## ಶ್ರೀ ಜಯತೀರ್ಥರು

**ಟೀಕಾಚಾರ್ಯರ ಪಾದ ಸೋಕಿದ ಕೊನೆಧೂಳಿ**

ತಾಕಿದ ಮನುಜರಿಗೆ
ಕಾಕುಗೊಳಿಸುವನೇಕಪಾಪಂಗಳ
ಬೀಕಿಬಿಸಾಕೋದು ಸಾಕುವ ಮನುಜಗೆ

ಮಧ್ವಮತವೆಂಬೋ ದುಗ್ಧಾಬ್ಧಿಯೊಳು
ಉದ್ಭವಿಸಿದ ಚಂದ್ರನೋ
ಅದ್ವೈತಮತ ವಿಪಿನ ಬೇಧ ಕುಠಾರ
ವಿದ್ಯಾರಣ್ಯರ ಗರ್ವಕ್ಕೆ ಪರಿಹಾರ

ತತ್ವವ ನುಡಿಸಲು ತತ್ವಸುಧಾಭಾಷ್ಯ
ವಿಸ್ತರಿಸಿದ ಚಂದ್ರನೋ
ಚಿತ್ತವಿಟ್ಟು ಮಾಡಿ ಟೀಕಾವನ್ನು
ಸುತ್ತೇಳು ಜಗಕೆಲ್ಲ ಪ್ರಕಟಿಸಿ ಮೆರೆದಂಥ

ಎಂದಿಗಾದರೂ ಒಮ್ಮೆ ಕೊನೆನಾಲಿಗೆಯಿಂದ
ಬಿಂದುಮಾತ್ರದಿ ನೆನೆಯೇ
ಮಂದಮತಿಗಾದರು ಅಜ್ಞಾನನಾಶನ
ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದಮೇಲೆ

ಜ ಎಂದು ನುಡಿಯಲು ಜಯಶೀಲನಾಗುವ
ಯ ಎಂದು ನುಡಿಯಲು ಯಮನಂಜುವ
ತೀ ಎಂದು ನುಡಿಯಲು ತಿಮಿರಪಾತಕ ಹಾನಿ
ರ್ಥ ಎಂದು ನುಡಿಯಲು ತಾಪತ್ರಯ ಪರಿಹಾರ

ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತ
ಭಾಗವತರ ಪ್ರಿಯನೇ
ಯೋಗಿಗಳರಸನೆ ಮಳಖೇಡ ನಿವಾಸ
ಕಾಗಿಣಿ ತಟವಾಸ **ವಿಜಯವಿಠಲ** ದಾಸ

--- --- ---

**ಸಾರಿಭಜಿಸಿರೋ ಟೀಕಾರಾಯರಂಘ್ರಿಯಾ**
ಘೋರಪಾತಕಾಂಭುದಿಯ ಪಾರು ಮಾಳ್ಪರ ॥ ಅ ಪ ॥

ಮೋದತೀರ್ಥರ ಮತವ ಸಾಧಿಸುವರ ।
ಪಾದ ಸೇವ್ಯರ ದುರ್ಭೋದ ಕಳೆವರ ॥ ೧ ॥

ಭಾಷ್ಯತತ್ವವ ವಿಸ್ತಾರ ಮಾಳ್ಪರ ।
ದೋಷದೂರರ ಆದಿಶೇಷ ವೇಷರ ॥ ೨ ॥

ಶ್ಯಾಮಸುಂದರ ಹರಿಗೆ ಪ್ರೇಮಪೂರ್ಣರ ।
ನೇಮನಿತ್ಯರ ನಿಷ್ಕಾಮನಾಪರ ॥ ೩ ॥

ಮೋಕ್ಷದಾತರ ಅಕ್ಷೋಭ್ಯತಿರ್ಥರ ।
ಸಾಕ್ಷಿ ಇಪ್ಪರ ಅಪೇಕ್ಷರಹಿತರ ॥ ೪ ॥

**ವಿಜಯವಿಠಲನ** ಅಂಘ್ರಿಭಜನೆ ಮಾಳ್ಪರ ।
ಕುಜನಭಂಜರ ದಿಗ್ವಿಜಯ ಮಾಳ್ಪರ ॥ ೫ ॥

--------

## ತಾರತಮ್ಯ ಸಂಗ್ರಹಪದ

**ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ**
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಅ ಪ ॥

ಜೀವ ಈಶಗೆ ಭೇದ, ಸರ್ವತ್ರ ಜೀವ ಜೀವಕೆ ಭೇದವು ।
ಜೀವ ಜಡ, ಜಡ ಜಡಕೆ ಭೇದ
ಜೀವ ಜಡ ಪರಮಾತ್ಮಗೆ ॥ ೧ ॥

ಮಾನುಷೋತ್ತಮಗಧಿಪ ಕ್ಷಿತಿಪರು
ಮನುಜದೇವ ಗಂಧರ್ವರು ।
ಜಾನಪಿತ್ರಾಜಾನಕರ್ಮಜದಾನವಾರಿತತ್ವಾತ್ಮರು ॥ ೨ ॥

ಗಣಪ ಮಿತ್ರರು ಸಪ್ತ ಋಷಿಗಳು
ವಹ್ನಿ ನಾರದ ವರುಣರು ।

ಇನಜಗೆ ಸಮ ಸುರ್ಯಚಂದ್ರರು ಮನಸುತೆಯು
ಹೆಚ್ಚುಪ್ರವಹನು ॥ ३ ॥

ದಕ್ಷಸಮ ಅನಿರುದ್ಧ-ಗುರು ಶಚಿ-ರತಿ
ಸ್ವಾಯಂಭುವರಾರ್ವರು ।
ಪಕ್ಷ ಪ್ರಾಣನಿಗಿಂತ ಕಾಮನು
ಕಿಂಚಿಧಿಕನು ಇಂದ್ರನು ॥ ೪ ॥

ದೇವೇಂದ್ರನಿಗಿಂದಧಿಕ ಮಹರುದ್ರದೇವ
ಸಮಶೇಷಗರುಡರು ।
ಕೇವಲಧಿಕರು ಶೇಷಗರುಡಗೆ
ದೇವಿ ಭಾರತಿ ಸರಸ್ವತಿ ॥ ೫ ॥

ವಾಯುವಿಗೆ ಸಮರಿಲ್ಲ ಜಗದೊಳು
ವಾಯುದೇವರೆ ಬ್ರಹ್ಮರು ।
ವಾಯು ಬ್ರಹ್ಮಗೆ ಕೋಟಿ ಗುಣದಿಂದ ಅಧಿಕ
ಶಕ್ತಳು ಶ್ರೀರಮಾ ॥ ೬ ॥

ಅನಂತ ಗುಣದಿಂ ಲಕುಮಿಗಧಿಕನು
**ಶ್ರೀ ಪುರಂದರ ವಿಠಲನು ।**
ಘನ ಸಮರು ಇವಗಿಲ್ಲ ಜಗದೊಳು
ಹನುಮಹೃತ್ಪದ್ಮವಾಸಿಗೆ ॥ ೭ ॥

## ಶ್ರೀ ಗಣಪತಿ

**ವಂದಿಪೆ ನಿನಗೆ ಗಣನಾಥ**

ಮೊದಲ್ವಂದಿಪೆ ನಿನಗೆ ಗಣನಾಥ
ಬಂದ ವಿಘ್ನ ಕಳೆಯೊ ಗಣನಾಥ
ಮೊದಲ್ವಂದಿಪೆ ನಿನಗೆ ಗಣನಾಥ

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ
ಸಂದ ರಣದಲ್ಲಿ ಗಣನಾಥ

ಮಾಧವನ ಆಜ್ಞೆಯಿಂದ ಧರ್ಮರಾಯ ಪೂಜಿಸಲು
ಸಾಧಿಸಿದ ರಾಜ್ಯ ಗಣನಾಥ

ಮಂಗಳ ಮೂರುತಿ ಗುರು ಿಂಗ**ವಿಠಲನ** ಪಾದ
ಹಿಂಗದೆ ಪಾಲಿಸೊ ಗಣನಾಥ

-----------

**ನಮ್ಮಮ್ಮ ಶಾರದೆ ಉಮಾ–ಮಹೇಶ್ವರಿ**

ನಿಮ್ಮೊಡನಿಹನಾರಮ್ಮ ।
ಕಮ್ಮಗೋಲನ ವೈರಿ–ಸುತನಾದ ಸೊಂಡಿಲ ।
ಹೆಮ್ಮೆಯ ಗಣನಾಥನೆ

ಮೋರೆ ಕಪ್ಪಿನ ಭಾವ ಮೊರದಗಲದ ಕಿವಿ
ಕೋರೆ ದಾಡೆಯನಾರಮ್ಮ ॥
ಮೂರುಕಣ್ಣನ ಸುತ ಮುರಿದಿಟ್ಟ ಚಂದ್ರನ
ಧೀರ ತಾ ಗಣನಾಥನೆ

ಉಟ್ಟದಟ್ಟಿಯು ಬಿಗಿದುಟ್ಟ ಚೆಲ್ಲಣದ
ದಿಟ್ಟ ತಾನಿವನಾರಮ್ಮ ॥
ಪಟ್ಟದ ರಾಣಿ ಪಾರ್ವತಿಯ ಕುಮಾರನು
ಹೊಟ್ಟೆಯ ಗಣನಾಥನೆ

ರಾಶಿವಿದ್ಯೆಯ ಬಲ್ಲ ರಮಣೀ ಹಂಬಲನೊಲ್ಲ
ಭಾಶಿಗನಿವನಾರಮ್ಮ
ಲೇಸಾಗಿ ಜನರ ಸಲಹುವ
***ಕಾಗಿನೆಲೆಯಾದಿ ಕೇಶವ***ದಾಸ ಕಾಣೆ

## ಶ್ರೀ ಪಾರ್ವತಿ ದೇವಿ

**ಪಾರ್ವತಿ ಪಾಲಿಸೆನ್ನ, ಮಾನಿನಿರನ್ನೆ**

ಪಾರ್ವತಿ ಭಕುತರ ಸಾರಥಿ ವಂದಿಪೆ
ಸುರಪತಿ ಗಜಮುಖ ಮೂರುತಿ ಮಾತೆ ॥ಅ ಪ॥

ಮನಕಭಿಮಾನಿಯೆ ನೆನೆವೆನು ನಿನ್ನನು
ಅನುಗ್ರಹಿಸೆನ್ನನು ಅಂಬುಜಪಾಣಿ ॥೧॥

ಮಂಗಳೆ ಮೃಡನಂತರಂಗಳೆ  ಹರಿಪದ
ಭೃಂಗಳೆ ತುಂಗಳೆ ಪನ್ನಂಗವೇಣಿ ॥೨॥

ಗುಣಪೂರ್ಣ ***ವೇಣುಗೋಪಾಲವಿಠಲ***ನ್ನ
ಕಾಣಿಸಿಕೊಡುವಂಥ ಶೂಲಿಯ ರಾಣಿ ॥೩॥

## ಶ್ರೀ ಮಹಾರುದ್ರದೇವರು

**ಕೈಲಾಸವಾಸ ಗೌರೀಶ ಈಶ**

ತೈಲಧಾರೆಯಂತೆ ಮನಸು ಕೊಡೊ ಹರಿಯಲ್ಲಿ ॥ಅಪ॥

ಅಹೋರಾತ್ರಿಯಲಿ ನಾನು ಅನುಜರಾಗ್ರಣಿಯಾಗಿ
ಮಹಿಯೊಳಗೆ ಚರಿಸಿದೆನೊ ಮಹಾದೇವನೇ
ಅಹಿಭೂಷಣನೆ–ಎನ್ನವಗುಣಗಳೆಣಿಸದಲೆ
ವಿಹಿತ ಧರ್ಮದಿ ವಿಷ್ಣು ಭಕುತಿಯನು
ಕೊಡೊ ಶಂಭೋ ॥೧॥

ಮನಸು ಕಾರಣವಲ್ಲ ಪಾಪಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ ॥
ದನುಜ ಗಜಮದ ವೈರಿ ದಂಡ ಪ್ರಣಾಮಮಾಳ್ಪೆ
ಮಣಿಸೋ ಈ ಶಿರವ ಸಜ್ಜನ ಚರಣ ಕಮಲದಲಿ ॥೨॥

ಭಾಗೀರಥೀ ಧರನೆ ಭಯವ ಪರಿಹರಿಸಯ್ಯ
ಲೇಸಾಗಿ ನೀ ಸಲಹೋ ಸತತ ಸರ್ವದೇವಾ ।
ಭಾಗವತ ಜನಪ್ರಿಯ **ವಿಜಯ ವಿಠಲ**ನಂಘ್ರಿ
ಜಾಗು ಮಾಡದೆ ಭಜಿಪ ಭಾಗ್ಯವನು ಕೊಡೊ ಶಂಭೋ ॥೩॥

––– ––– –––

**ಧವಳ ಗಂಗೆಯ ಗಂಗಾಧರ ಮಹಾಲಿಂಗ**
ಮಾಧವನ ತೋರಿಸೈಯ್ಯ ಗುರು ಕುಲೋತ್ತುಂಗ

ಅರ್ಚಿಸಿದವರಿಗಭೀಷ್ಟವ ಕೊಡುವಾ
ಹೆಚ್ಚಿನ ಅಘಗಳ ತರಿದು ಬಿಸಾಡುವ
ದುಶ್ಚರಿತಗಳೆಲ್ಲ ದೂರದಲ್ಲಿಡುವಾ
ನಮಚ್ಯುತಗಲ್ಲದ ಅಸುರರ ಬಡಿವಾ

ಮಾರನ ಗೆದ್ದ ಮನೋಹರ ಮೂರ್ತಿ
ಸಾಧು ಸಜ್ಜನರಿಗೆ ಸುರಚಕ್ರವರ್ತಿ
ಧಾರುಣಿಯೊಳಗೆ ತುಂಬಿದೆ ನಿನ್ನ ಕೀರ್ತಿ
ಮುರಾರಿಯ ತೊರಿಸೈಯ್ಯ ನಿನಗೆ ಶರಣಾರ್ಥಿ

ಚನ್ನಪ್ರಸನ್ನ ಶ್ರೀಹಯವದನನ್ನ
ಅನುದಿನ ನೆನೆವಂತೆ ಮಾಡೋ ನೀ ಎನ್ನ
ಅನ್ಯನಲ್ಲವೋ ನಾನು ಗುರುವೆಂಬೆ ನಿನ್ನ
ಇನ್ನಾದರೂ ತೋರೊ ಹರಿಯ ಮುಕ್ಕಣ್ಣ

## ಶ್ರೀ ಶೇಷದೇವರು

ಯೋಗಿಗಳ ಹೃದಯಕೆ ನಿಲುಕ ನಿಗ।
ಮಾಗಮೈಕವಿನುತನ ಪರಮನು ।
ರಾಗದಿಂ ದ್ವಿಸಹಸ್ರ ಜಿಹ್ವೆಗಳಿಂದ ವರ್ಣಿಸುವ ॥
ಭೂಗಗನ ಪಾತಾಳವ್ಯಾಪ್ತನ।
ಯೋಗನಿದ್ರಾಸ್ಪದನೆನಿಪ ಗುರು।

ನಾಗರಾಜನ ಪದಕೆ ನಮಿಸುವೆ ಮನದೊಳನವರತ ॥

## ಶ್ರೀ ಗರುಡ ದೇವರು

ಜಗದುದರನ ಸುರೋತ್ತಮನ ನಿಜ ।
ಪೆಗಲೊಳಾಂತು ಕರಾಬ್ಜದೋಳ್ ಪದ ।
ಯುಗ ಧರಿಸಿ ನಖಪಂಕ್ತಿಯೊಳು ರಮಣೀಯತರವಾದ ।
ನಗಧರನ ಪ್ರತಿಬಿಂಬ ಕಾಣುತ ।
ಮಿಗೆ ಹರುಷದಿಂ ಪೊಗಳಿ ಹಿಗ್ಗುವ ।
ಖಗಕುಲಾಧಿಪ ಕೊಡಲಿ ಮಂಗಳ ಸಕಲ ಸುಜನರಿಗೆ

## ಶ್ರೀ ಭಾರತಿ ದೇವಿ

**ಭಾರತಿ ಭಕುತಿಯನ್ನು ಕೊಡುವುದು**

ಮಾರುತ ಸತಿ ನೀನು ॥ಪ॥

ಮೂರು ಲೋಕದೊಳಗಾರು ನಿನಗೆ ಸರಿ
ಮುರಾರಿಗಳಿಂದಾರಾಧಿತಳೆ ॥ಅಪ॥

ವಾಣಿ ಎನ್ನ ವದನದಲ್ಲಿಡು ಮಾಸದೆ ಹರಿಸ್ತವನ
ವೀಣಾಧೃತ ಸುಜ್ಞಾನಿಯ ಪಂಕಜಪಾಣಿಯೆ
ಕೋಕಿಲವಾಣಿಯೆ ಪಾಲಿಸು ॥೧॥

ಸುಂದರಿ ಶುಭಕಾರಿ ಸುಮನಸ ವೃಂದ ಶೋಭಿತ ಕಬರಿ ।
ಮಂದಹಾಸ ಮುಖದಿಂದ ನೋಡಿ ನಿನ್ನ
ಕಂದನೆಂದು ಎನ್ನ ಮುಂದಕೆ ಕರೆಯೇ ॥೨॥

ಮಂಗಳಾಂಗಿ ಎನ್ನ ಅಂತರಂಗದೊಳಿರು ಮುನ್ನ ।
ತುಂಗ ವಿಕ್ರಮ ತಂದೆ **ಗೋಪಾಲವಿಠಲ**
ಹಿಂಗದೆ ನೆನೆವ ಸುಖಂಗಳ ನೀಡೆ ॥೩॥

## ಶ್ರೀ ಸರಸ್ವತಿ ದೇವಿ

**ಕೊಡು ಬೇಗ ದಿವ್ಯ ಮತಿ ಸರಸ್ವತಿ**

ಮೃಡಹರಿ ಹಯಮುಖರೊಡೆಯಳೆ ನಿನ್ನಯ
ಅಡಿಗಡಿಗೆರಗುವೆ ಅಮ್ಮ ಬ್ರಹ್ಮನ ರಾಣಿ

ಇಂದಿರಾರಮಣನ ಹಿರಿಯ ಸೊಸೆಯು ನೀನು
ಬಂದೆನ್ನ ವದನದಿ ನಿಂದು ನಾಮವ ನುಡಿಸೆ

ಅಖಿಳವಿದ್ಯಾಭಿಮಾನಿ ಅಜನಪಟ್ಟದರಾಣಿ

ಸುಖವಿತ್ತು ಪಾಲಿಸೆ ಸುಜನಶಿರೋಮಣಿ

ಪತಿತಪಾವನೆ ನೀನೆ ಗತಿಯೆಂದು ನಂಬಿದೆ
ಮತಿಗೊಟ್ಟು **ಪುರಂದರ ವಿಠಲನ** ತೋರೆ

--- --- ---

**ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ**

ವಾಗಭಿಮಾನಿ ವರ ಬ್ರಹ್ಮಾಣಿ ।
ಸುಂದರವೇಣಿ ಸುಚರಿತ್ರಾಣಿ ॥ ಅ ಪ ॥

ಜಗದೊಳು ನಿಮ್ಮ ಪೊಗುಳುವೆ ನಮ್ಮ ।
ಹರಿಯ ತೋರಿಸೆಂದು ಪ್ರಾರ್ಥಿಪೆನಮ್ಮ ॥ ೧ ॥

ಪಾಡುವೆ ಶ್ರುತಿಯ ಬೇಡುವೆ ಮತಿಯ
**ಪುರಂದರ ವಿಠಲನ** ಸೋದರಸೊಸೆಯ ॥ ೨ ॥

--- --- ---

## ಶ್ರೀ ಮುಖ್ಯಪ್ರಾಣದೇವರು

**ಕೂಸಿನ ಕಂಡೀರಾ ಮುಖ್ಯಪ್ರಾಣನ ಕಂಡೀರ**

ಬಾಲನ ಕಂಡೀರಾ ಬಲವಂತನ ಕಂಡೀರ

ಅಂಜನೆಯುದರದಿ ಪುಟ್ಟಿತು ಕೂಸು
ರಾಮನ ಚರಣಕ್ಕೆರಗಿತು ಕೂಸು
ಸೀತೆಗೆ ಉಂಗುರ ಕೊಟ್ಟಿತು ಕೂಸು
ಲಂಕಾಪುರವನೆ ಸುಟ್ಟಿತು ಕೂಸು

ಭಂಡಿ ಅನ್ನವನುಂಡಿತು ಕೂಸು
ಬಕನ ಪ್ರಾಣವಕೊಂದಿತು ಕೂಸು
ವಿಷದಲಡ್ಡುಗೆ ಮೆದ್ದಿತು ಕೂಸು
ಮಡದಿಗೆ ಪುಷ್ಪವ ಕೊಟ್ಟಿತು ಕೂಸು

ಮಾಯವಾದಿಗಳ ಗೆದ್ದಿತು ಕೂಸು
ದ್ವೈತಮತವನ್ನುದ್ಧರಿಸಿತು ಕೂಸು
ಮಧ್ವರಾಯನೆಂಬೊ ಹೆಸರಿನ ಕೂಸು
**ಪುರಂದರ ವಿಠಲನ** ಪ್ರೇಮದ ಕೂಸು

--- --- ---

**ಅಂಜಿಕಿನ್ಯಾತಕಯ್ಯಾ । ಸಜ್ಜನರಿಗೆ**

ಭಯವು ಇನ್ಯಾತಕಯ್ಯಾ ॥ಪ॥
ಸಂಜೀವರಾಯರ ಸ್ಮರಣೆ ಮಾಡಿದಮೇಲೆ ॥ಅಪ॥

ಕನಸಲಿ ಮನಸಲಿ ಕಳವಳವಾದರೆ ।
ಹನುಮನ ನೆನೆದರೆ ಹಾರಿ ಹೋಗದೆ ಪಾಪ ॥೧॥

ರೋಮ ರೋಮಕೆ ಕೋಟಿ ಲಿಂಗವುದುರಿಸಿದ ।
ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ ॥೨॥

**ಪುರಂದರ ವಿಠಲನ** ಪಾದಪೂಜೆಯ ಮಾಳ್ಪ ।
ಗುರು ಮಧ್ವರಾಯರ ಸ್ಮರಣೆಮಾಡಿದ ಮೇಲೆ ॥೩॥

--- --- ---

**ಘಟಿಕಾಚಲದಿ ನಿಂತಾ ಹನುಮಂತಾ ॥**

ಘಟಿಕಾಚಲದಿ ನಿಂತಾ ॥ ಪ ॥
ಘಟಿಕಾಚಲದಿ ನಿಂತ ಪಟು ಹನುಮಂತನು
ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ॥ ಅ ಪ ॥
ಚತುರಯುಗದಿ ತಾನು ಮುಖ್ಯಪ್ರಾಣನು।
ಚತುರಮುಖನಯ್ಯನ ।
ಚತುರ ಮೂರುತಿಗಳನು ಚತುರತನದಿ ಭಜಿಸಿ ।
ಚತುರ್ಮುಖನಾಗಿ ಜಗಕೆ ಚತುರ್ವಿಧ ಫಲವಕೊಡುತ ॥ ೧ ॥

ಸರಸಿಜಭವಗೋಸ್ಕರ । ಕಲ್ಮಷದೂರ
ವರಚಕ್ರ ತೀರ್ಥಸರ ।
ಮೆರೆವಾಚಲದಿ ನಿತ್ಯ ನರಹರಿಗೆದುರಾಗಿ ।
ಸ್ಥಿರಯೋಗಾಸನದಿ ಕರೆದು ವರವಗಳ ಕೊಡುತ ॥ ೨ ॥

ಶಂಖಚಕ್ರವಧರಿಸಿ ಭಕ್ತರ ಮನ ।
ಪಂಕವ ಪರಿಹರಿಸಿ ।
ಪಂಕಜನಾಭ **ಶ್ರೀ ಪುರಂದರವಿಠಲನ** ।
ಬಿಂಕದ ಸೇವಕ ಸಂಕಟಕಳೆಯುತ ॥ ೩ ॥

--- --- ---

**ಪವಮಾನ ಜಗದಪ್ರಾಣಾ ಸಂಕರುಷಣ- ॥**

ಭವ, ಭಯಾರಣ್ಯ ದಹನ ॥ ಪ ॥
ಶ್ರವಣವೆ ಮೊದಲಾದ ನವವಿಧ ಭಕುತಿಯ ।
ತವಕದಿಂದಲಿ ಕೊಡು ಕವಿಜನ ಪ್ರಿಯಾ ॥ ಅ ಪ ॥

ಹೇಮಕಚ್ಚುಟು ಉಪವೀತ ಧರಿಪ ಮಾರುತ ।
ಕಾಮಾದಿ ವರ್ಗರಹಿತ ॥
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ ।

ರಾಮಚಂದ್ರನ ನಿಜದೂತ ॥

ಯಾಮ ಯಾಮಕೆ ನಿನ್ನಾರಾಧಿಪುದಕೆ ।
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ ।
ಈಮನಸಿಗೆ ಸುಖಸ್ತೋಮವ ತೋರುತ ।
ಪಾಮರಮತಿಯನು ನೀ ಮಾಣಿಪುದು ॥ ೧ ॥

ವಜ್ರಶರೀರಗಂಭೀರ ಮುಕುಟಧರ ।
ದುರ್ಜನ ವನಕುಠಾರಾ ।
ನಿರ್ಜರ ಮಣಿ ದಯಾ ಪಾರವಾರ ಉದಾರ ।
ಸಜ್ಜನರಘಪರಿಹಾರಾ ॥

ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ।
ಮೂರ್ಜಗವರಿವಂತೆ ಗರ್ಜನೆ ಮಾಡಿದೆ ।
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ ।
ಮಾರ್ಜನದಲಿ ಭವವರ್ಜಿತನೆನಿಸಿಸೊ ॥ ೨ ॥
ಪ್ರಾಣ ಅಪಾನವ್ಯಾನೋದಾನ ಸಮಾನಾ ।
ಆನಂದಭಾರತಿ ರಮಣಾ ।
ನೀನೇ ಶರ್ವಾದಿಗೀರ್ವಾಣಾದ್ಯರಿಗೆ
ಜ್ಞಾನಧನಪಾಲಿಪವರೇಣ್ಯ ।

ನಾನು ನಿರುತದಲಿ ಏನೇನೆಸಗಿದೆ ॥
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ ।
ಪ್ರಾಣನಾಥ ಸಿರಿ**ವಿಜಯ ವಿಠಲ**ನ ।
ಕಾಣಿಸಿಕೊಡುವದು ಭಾನುಪ್ರಕಾಶಾ ॥ ೩ ॥

-----------

**ವೀರ ಹನುಮ ಬಹು ಪರಾಕ್ರಮ**
ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ॥ ಅ ಪ ॥

ರಾಮದೂತನೆನಿಸಿಕೊಂಡೆ ನೀ । ರಾಕ್ಷಸರ ।
ವನವನೆಲ್ಲ ಕಿತ್ತು ಬಂದೆ ನೀ
ಜಾನಕಿಗೆ ಮುದ್ರೆಯಿತ್ತು ಜಗತಿಗೆಲ್ಲ ಹರುಷವಿತ್ತು ।
ಚೂಡಾಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ
ಮೆರೆವ ॥ ವೀರ ॥ ॥ ೧ ॥

ಗೋಪಿಸುತನ ಪಾದ ಪೂಜಿಸಿ । ಗದೆಯ ಧರಿಸಿ ।
ಬಕಾಸುರನ ಸಂಹರಿಸಿದೆ ॥
ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನ ಕೊಂದ ಭೀಮನೆಂಬ ನಾಮ ಧರಿಸಿ ಸಂಗ್ರಾಮಧೀರನಾಗಿ
ಜಗದಿ ॥ ವೀರ ॥ ॥ ೨ ॥

ಮಧ್ವಗೇಹನಲ್ಲಿ ಜನಿಸಿ ನೀ । ಬಾಲ್ಯದಲ್ಲಿ । ಮಸ್ಕರೀಯ ರೂಪಗೊಂಡೆ ನೀ ॥ ಸತ್ಯವತಿಯ ಸುತನ ಭಜಿಸಿ ಸಮ್ಮುಖದಿ ಭಾಷ್ಯ ಮಾಡಿ । ಸಜ್ಜನರ ಪೊರೆವ ಮುದ್ದು **ಪುರಂದರವಿಠಲ**ದಾಸ ॥ ವೀರ ॥ ॥ ೩ ॥

--- --- ---

**ಸಂಜೀವನ ಗಿರಿಧರ ಪಾಹಿ ಮಾಂ**

ಚಕ್ರತೀರ್ಥವಾಸ ಶಕ್ರಾದ್ಯಮರಧೀಶ
ವಕ್ರಾನನ ಮಾರುತಿ ಪಾಹಿಮಾಂ

ಮಂತ್ರ ಮೂಲಸ್ಥಿತ ಕಂತುಪಿತನ ದೂತ
ಯಂತ್ರೋದ್ಧಾರಕ ಪಾಹಿ ಮಾಂ

ಮೋಹನ ವಿಠಲ ದಾಸಪೋಷಕ ಮಾಯಾ
ಮೋಹಕ ಭಂಜನ ಪಾಹಿ ಮಾಂ

-------------

**ಭಾರವೇ ಭಾರತೀರಮಣ ನಿನಗೆ ನಾ ಭಾರವೆ ಭಾರತೀರಮಣ ।**

ಲಂಕಾನಾಥನ ಬಿಂಕವ ಮುರಿದು ಅಕಳಂಕಚರಿತನ ಕಿಂಕರನೆನಿಸಿದೆ ।
ಪಂಕಜಾಕ್ಷಿಗೆ ಅಂಕಿತದುಂಗುರವಿಟ್ಟು ಶಂಕೆಯಿಲ್ಲದೆ ನೀ ಲಂಕೆಯ ದಹಿಸಿದೆ ।೧।

ಸೋಮಕುಲದಿ ನೀಸ್ಸೀಮ ಮಹಿಮನೆನೆಸಿ ತಾಮಸಬಕನ ನಿರ್ದೂಮಮಾಡಿದೇ ।
ಕಾಮಿನಿಮೋಹಿಸೇ ಪ್ರೇಮದಿಸಲಹಿದೆ ತಾಮರಸಾಕ್ಷನ ಸೇವೆಯ ಮಾಡಿದೆ ।೨।

ವೇದವ್ಯಾಸರ ಪೂಜೆಯ ಮಾಡಿ ಮೋದದಿಂದ ಬಹುವಾದಗಳಾಡಿ ।
ಅಧಮಶಾಸ್ತ್ರಗಳ ಹೋಮವ ಮಾಡಿ **ವಿಜಯ ವಿಠ್ಠಲ**ನ ಸೇವೆಯಾ ಮಾಡಿದೇ ।೩।

-------------

## ಶ್ರೀ ಬ್ರಹ್ಮದೇವರು

ನಿರುಪಮಾನಂದಾತ್ಮಭವ ನಿ- ।
ರ್ಜರಸಭಾಸಂಸೇವ್ಯ ಋಜುಗಣ-।
ದರಸೆ ಸತ್ವಪ್ರಚುರ ವಾಣೀಮುಖ ಸರೋಜೇನ ॥
ಗರುಡಶೇಷಶಶಾಂಕದಳಶೇ-।
ಖರರ ಜನಕ ಜಗದ್ಗುರುವೆ ತ್ವ-।
ಚ್ಚರಣಗಳಿಭಿವಂದಿಸುವೆ ಪಾಲಿಪುದು ಸನ್ಮತಿಯ॥

## ಶ್ರೀ ಲಕ್ಷ್ಮೀದೇವಿ

**ಭಾಗ್ಯದ ಲಕ್ಷ್ಮೀ ಬಾರಮ್ಮಾ**

ನಮ್ಮಮ್ಮಾ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮಾ

ಹೆಜ್ಜೆಯ ಮೆಲೊಂದ ಹೆಜ್ಜೆಯನಿಕ್ಕುತ
ಗೆಜ್ಜೆಕಾಲಗಳ ಧನಿಯನು ತೋರುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ

ಕನಕವೃಷ್ಟಿಯ ಕರೆಯುತ ಬಾರೆ
ಮನ ಕಾಮನೆಯ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಹೊಳೆಯುವ
ಜನಕರಾಯನ ಕುಮಾರಿ ಬೇಗ

ಅತ್ತಿತ್ತಗಲದೆ ಭಕ್ತರ ಮನೆಯೊಳು
ನಿತ್ಯ ಮಹೊತ್ಸವ ನಿತ್ಯ ಸುಮಂಗಲ
ಸತ್ಯವ ತೋರೊ ಸಾಧುಸಜ್ಜನರ
ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ

ಶಂಕೆ ಇಲ್ಲದ ಭಾಗ್ಯವ ಕೊಟ್ಟು
ಕಂಕಣ ಕೈಯ ತಿರುವುತ ಬಾರೆ
ಕುಂಕುಮಾಂಕಿತೆ ಪಂಕಜ ಲೋಚನೆ
ವೆಂಕಟರಮಣನ ಬಿಂಕದ ರಾಣಿ

ಸಕ್ಕರೆ ತುಪ್ಪ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿ ರಂಗನ
ಚೊಕ್ಕ **ಪುರಂದರವಿಠ್ಠಲ**ನ ರಾಣಿ

--------

**ಹೊಸಕಣ್ಣು ಎನಗೆ ಹಚ್ಚಲೇಬೇಕು ಜಗದಂಬ**

ವಸುದೇವಸುತನ ಕಾಂಬುದಕೆ
ಘಸಣೆಯಾಗಿದೆ ಭವವಿಷಯವಾರಿಧಿಯೋಳು
ಶಶಿಮುಖಿ ಕರುಣದಿ ಕಾಯೇ .. ಅಮ್ಮಾ

ಪರರ ಅನ್ನವನುಂಡು ಪರರಧನವಕಂಡು
ಪರಿಪರಿ ಕ್ಲೇಶಗಳುಂಡೆ
ವರಮಹಾಲಕುಮಿ ನಿನ್ನ ಚರಣಕ್ಕೆ ಮೊರೆಹೊಕ್ಕೆ
ಕರುಣದಿ ಕಣ್ಣೆತ್ತಿ ನೋಡೇ .. ಅಮ್ಮಾ

ಮಂದಹಾಸಿನಿ ಭವಸಿಂಧುವಿನೊಳಗಿಟ್ಟು
ಚಂದವೆ ಅಮ್ಮಾ ನೋಡುವುದು
ಕಂದನಂತಂದೆನ್ನ ಕುಂದುಗಳೆಣಿಸದೆ
ಮಂಧರೋದ್ಧರನ ತೋರಮ್ಮ .. ಅಮ್ಮಾ

ಅಂದಚಂದಗಳೊಲ್ಲೆ ಬಂಧುಬಳಗವೊಲ್ಲೆ
ಬಂಧನಕೆಲ್ಲ ಕಾರಣವು
**ಇಂದಿರೇಶನ** ಪಾದದ್ವಂದ್ವವ ತೋರಿ
ಹೃನ್ಮಂದಿರದೊಳು ಬಂದು ನಿಲ್ಲೇ .. ಅಮ್ಮಾ

---------

***ಓಲಿದೆ ಯಾತಕಮ್ಮಾ ಲಕುಮಿ ವಾಸುದೇವಗೆ***

ಹಲವಂಗದವನ ಹವಣೆ ತಿಳಿದು ತಿಳಿದು ತಿಳಿಯದ್ವಾಂಗೆ

ಕಮಲಗಂಧಿ ಕೋಮಲಾಂಗಿ ಸುಂದರಾಬ್ಜ ವದನೆ ನೀನು
ರಮಣ ಮತ್ಸ್ಯ ಕಠಿಣಕಾಯ ಸೂಕರಾಸ್ಯನು
ರಮಣೀಯ ಸ್ವರೂಪಿ ನೀನು ಅಮಿತ ಘೋರ ರೂಪನವನು
ನಮಿಪರಿಷ್ಟದಾನಿ ನೀನು ದಾನವ ಬೇಡುವವನಿಗೆ

ಜಾಣೆ ರತ್ನಾಕರನ ಮಗಳು ತಾನು ಶುದ್ಧ ಭ್ರುಗುಜನನವನು
ಆನಂದಾಬ್ಜಸದನೆ ನೀನು ವನವಾಸಿಯವನು
ಮಾನು ಪತಿವ್ರತೆಯು ನೀನು ನಾನಾಯೋನಿಷಿತ್ಕಾಮಿಯವನು
ಜ್ಞಾನೆ ಚಿತ್ರವಸನೆ ನೀನು ಹೀನಚೈಲದವನಿಗೆ

ಲಲಿತಚಾರುಶೀಲೆ ನೀನು ಕಲಿ ಕಲಹಪ್ರೀಯನವನು
ಕುಲದ ಕುರುಹು ಇಲ್ಲ ಗುಣದ ನೆಲಯ ಕಂಡಿಲ್ಲ
ಹಲವು ಕಾಲದವನು ಅವನ ಬಳಗಬಂಧು ನಿಷ್ಕಿಂಚಿನರು
ಜಲದಿ ಆಲದೆಲೆಯಮೇಲೆ ಮಲಗಿ ಬೆರಳಚೀಪುವನಿಗೆ

ಅವನ ವಾರ್ತೆ ಕೇಳಿದವರು ಒಲ್ಲರು ಸಂಸಾರವನ್ನು
ಅವನ ಮೂರ್ತಿ ನೋಡಿದವರು ಮನೆಯ ಧನವ ಬಿಡುವರು
ಅವನ ಪುರಕೆ ಪೋದ ಜನರು ಒಮ್ಮೆಗನ್ನ ಹಿಂದಿರುಗರು
ಅವನು ತಾನೆ ತನಯರನ್ನು ತನ್ನವಯವದಿ ಪಡೆದವಗೆ

ಸ್ವರತಾನಪೇಕ್ಷಾಕಾಮಿ ನಿದ್ರಾಹೀನ ಅನಶನಿಯು
ಸ್ವರುಶರೂಪ ವಾಚ್ಯಶಬ್ದ ಅಮಿತಭೊಕ್ತನು
**ಗುರುಗೋಪಾಲ ವಿಠಲ**ನು ನಿರುತ ತನ್ನ ವಕ್ಷದೊಳು
ಅರಮನೆಯ ಮಾಡಿಕೊಟ್ಟು ಮರಳು ಮಾಡಿದ ಮಾಯಾವಿಗೆ

--------------

**ಪಾಲಿಸೆ ಪದುಮಾಲಯೆ ನೀನೆ ಗತಿ**

ಪಾಲಿಸೆ ಪದುಮಾಲಯೆ
ಬಾಲಕನು ತಾನಾಗಿ ಗೋಪಿಗೆ ಲೀಲೆಯಿಂದಲಿ ನಂದಗೋಕುಲ
ಬಾಲೆಯರ ಮೋಹಿಸುತ ಅಸುರರ ಕಾಲನೆನಿಸಿ ಬಾಲಕನ ಪ್ರಿಯೆ

ಅನ್ಯರ ನೆನೆಯಲೊಲ್ಲೆ ನಿನ್ನಯ ಪಾದ
ವನ್ನು ನಂಬಿದೆ ನೀ । ಬಲ್ಲೆ ತಡಮಾಡದಲೆ
ಚಿಣ್ಣ ಕರೆಯಲು ಘನ್ನ ಮಹಿಮನು
ಉನ್ನತದ ರೂಪಿನಲಿ ಗುಣಸಂಪನ್ನ
ರಕ್ಕಸರನ್ನು ಸೀಳಿದ ಪನ್ನಗಾದ್ರಿನಿವಾಸ ಹರಿಪ್ರಿಯೆ

ಅರಿಯದ ತರಳನೆಂದು ಶ್ರೀಪತಿಸತಿ
ಕರುಣದಿ ಸಲಹೆ ಬಂದು ಕರುಣಾಸಿಂಧು
ಸರಸಿಜಾಸನ ರುದ್ರರೀರ್ವರ ವರದಿ ಮೂರ್ಖನು
ಸುರರ ಭಾಧಿಸೆ ಹರಿವರರ ದಂಡೆತ್ತಿ ಬಹುಮುಖ
ದುರಳನಾ ಶಿರ ತರಿದವನಪ್ರಿಯೆ

ಅಜಮನಸಿಜ ಜನನೀ । ಅಂಬುಜಪಾಣಿ
ಭುಜಗಸನ್ನಿಭವೇಣಿ ನಿತ್ಯ ಕಲ್ಯಾಣಿ
ಕುಜನಮರ್ದನ **ವಿಜಯವಿಠಲ**ನ ಭಜಿಸಿ ಪಾಡುವ
ಭಕ್ತಕೂಟವ ನಿಜದಿ ಸಲುಹುವೆನೆಂಬ ಬಿರುದುಳ್ಳ
ವಿಜಯ ಸಾರಥಿ ವಿಶ್ವಂಭರನ ಪ್ರಿಯೆ

## ಶ್ರೀ ದೇವರ ಕೀರ್ತನೆಗಳು

**ರಂಗ ಬಾರೋ ಪಾಂಡುರಂಗ ಬಾರೋ**
ರಂಗ ಬಾರೋ ನರಸಿಂಗ ಬಾರೋ ॥ಅಪ॥

ಕಂದ ಬಾರೋ ಎನ್ನ ತಂದೆ ಬಾರೋ ।
ಇಂದಿರಾ ರಮಣ ಮುಕುಂದ ಬಾರೋ ॥೧॥

ಅಪ್ಪ ಬಾರೋ ತಿಮ್ಮಪ್ಪ ಬಾರೋ ।
ಕಂದರ್ಪನಯ್ಯನೆ ಕಂಚಿವರದ ಬಾರೋ ॥೨॥

ಅಣ್ಣ ಬಾರೋ ಎನ್ನ ಚಿನ್ನ ಬಾರೋ ।
ಪುಣ್ಯಮೂರ್ತಿ ಮಹಿಷಪುರಿ ಚಿನ್ನ ಬಾರೋ ॥೩॥

ವಿಷ್ಣು ಬಾರೋ ಉಡುಪಿ ಕೃಷ್ಣ ಬಾರೋ ।
ಎನ್ನಿಷ್ಟ ಮೂರ್ತಿ **ಪುರಂದರ ವಿಠಲ** ಬಾರೋ ॥೪॥
-- --- ---

**ಕರ್ತಾ ಕೃಷ್ಣಯ್ಯ ನೀ ಬಾರಯ್ಯ**
ಎನ್ನಾರ್ತಧ್ವನಿಗೊಲಿದು ನೀ ಬಾರಯ್ಯ

ಸುಗುಣದ ಖಣಿಯೆ ನೀ ಬಾರಯ್ಯ ಏ

ಮೃಘವನೋಡಿಸಲು ನೀ ಬಾರಯ್ಯ
ಧಗೆಯೇರಿತು ತಾಪ ನೀ ಬಾರಯ್ಯ ಸದಾ
ಮುಗುಳ್ನಗೆಯ ಮಳೆಗರೆಯೆ ನೀ ಬಾರಯ್ಯ

ವೈರಿವರ್ಗದೆ ನೊಂದೆ ನೀ ಬಾರಯ್ಯ । ಮ
ತ್ಯಾರು ಗೆಳೆಯರಿಲ್ಲ ನೀ ಬಾರಯ್ಯ
ಸೆರಿದೆ ನಿನ್ನಯ ಕರುಣೆಗೆ ಬಾರಯ್ಯ ಒಳ್ಳೆ
ದಾರಿಯ ತೋರ್ಲು ನೀ ಬಾರಯ್ಯ

ವೈರಾಗ್ಯಭಾಗ್ಯವ ಕೊಡಬಾರಯ್ಯ । ನಾನಾ
ರೋಗದ ಭೇಷಜ ನೀ ಬಾರಯ್ಯ
ಜಾರುತದಾಯು ಬೇಗ ಬಾರಯ್ಯ । ಉ
ದಾರ **ಪ್ರಸನ್ನವೆಂಕಟ** ನೀ ಬಾರಯ್ಯ

------------

**ಯಾದವ ನೀ ಬಾ ಯದುಕುಲ ನಂದನ**
ಮಾಧವ ಮದುಸೂದನ ಬಾರೋ
ಕಣಕಾಲೊಂದಿಗೆ ಘುಲುಘುಲು ಎನುತಲಿ
ಝಣ ಝಣ ಎನುತಿಹ ನಾದಗಳು
ಚಿಣಿಕೋಲು ಚೆಂಡು ಬುಗುರಿಯನಾಡುತ
ಸಣ್ಣವರೊಡಗೂಡಿ ನೀ ಬಾರೋ

ಶಂಖ ಚಕ್ರವು ಕೈಯಲಿ ಹೊಳೆಯುತ
ಬಿಂಕದ ಗೋವಳ ನೀ ಬಾರೋ
ಅಕಳಂಕ ಮಹಿಮನೇ ಆದಿ ನಾರಾಯಣ
ಬೇಕೆಂಬ ಭಕುತರಿಗೆ ಒಲಿ ಬಾರೋ

ಖಗವಾಹನನೇ ಬಗೆಬಗೆ ರೂಪನೆ
ನಗೆಮುಖ ಧರಿಸಿ ನೀ ಬಾರೋ
ಜಗದೊಳು ನಿನ್ನಯ ಮಹಿಮೆಯ ಪೂಗಳುವೆ
**ಪುರಂದರ ವಿಠಲ** ನೀ ಬಾರೋ

------------

**ದೇವ ಬಂದಾ ನಮ್ಮ ಸ್ವಾಮಿ ಬಂದಾನೋ**
ದೇವರ ದೇವ ಶಿಖಾಮಣಿ ಬಂದಾನೋ ॥ಅಪ॥

ಉರಗಶಯನ ಬಂದ । ಗರುಡಗಮನ ಬಂದ ।
ನರಗೊಲಿದವ ಬಂದ ನಾರಾಯಣ ಬಂದ ॥೧॥

ಮಂಥರೋದ್ಧರ ಬಂದ । ಮಾ ಮನೋಹರ ಬಂದ ।

ವೃಂದಾವನಪತಿ ಗೋವಿಂದ ಬಂದಾನೋ ॥೨॥

ನಕ್ರಹರನು ಬಂದ । ಚಕ್ರಧರನು ಬಂದ ।
ಅಕ್ರುರಗೊಲಿದ ತ್ರಿವಿಕ್ರಮ ಬಂದಾನೋ ॥೩॥

ಪಕ್ಷಿವಾಹನ ಬಂದ । ಲಕ್ಷ್ಮಣಾಗ್ರಜ ಬಂದ ।
ಅಕ್ಷಯ ಫಲದಾ । ಶ್ರೀ ಲಕ್ಷ್ಮೀರಮಣ ಬಂದ ॥೪॥

ನಿಗಮಗೋಚರ ಬಂದ । ನಿತ್ಯ ತೃಪ್ತನು ಬಂದ
ನಗೆಮುಖ **ಪುರಂದರ ವಿಠಲ** ಬಂದಾನೋ ॥೫॥

--- --- ---

*ಇಂದು ಎನಗೆ ಶ್ರೀ ಗೋವಿಂದ*

ನಿನ್ನ ಪಾದಾರವಿಂದವ ತೋರೋ ಮುಕುಂದ ಇಂದಿರೆ ರಮಣ

ಸುಂದರ ವದನನೆ ನಂದಗೋಪನ ಕಂದ
ಮಂದರೋದ್ಧಾರ ಆನಂದ ಇಂದಿರೆ ರಮಣ

ನೊಂದೆನಯ್ಯ ನಾ ಭವ ಬಂಧನದೊಳು ಸಿಲುಕಿ
ಮುಂದೆ ದಾರಿಗಾಣದೆ ಕುಂದಿದೆ ಜಗದೊಳು
ಕಂದನೆಂದೆನ್ನಯ ಕುಂದುಗಳೆಣಿಸದೆ
ತಂದೆ ಕಾಯೋ ಕೃಷ್ಣ ಕಂದರ್ಪ ಜನಕನೆ

ಮೂಢತನದಿ ಬಲು ಹೇಡಿ ಜೀವನನಾಗಿ
ಧೃಢ ಭಕುತಿಯನು ಮಾಡಲಿಲ್ಲವೋ ಹರಿಯೇ
ನೋಡಲಿಲ್ಲವೋ ನಿನ್ನ ಪಾಡಲಿಲ್ಲವೋ ಮಹಿಮೆ
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ

ಧಾರುಣಿಯೊಳು ಭೂಭಾರ ಭಾಜನನಾಗಿ (ಜೀವನನಾಗಿ)
ದಾರಿ ತಪ್ಪಿ ನಡೆದೆ ಸೇರಿದೆ ಕುಜನರ
ಆರು ಕಾಯುವವರಿಲ್ಲ ಸೇರಿದೆ ನಿನಗಯ್ಯ
ಧೀರ ವೇಣುಗೋಪಾಲ ಪಾರುಗಾಣಿಸೋ ಎನ್ನ

----------------

**ಕಾಗದ ಬಂದಿದೆ ಕಮಲನಾಭನದು**

ಈ ಕಾಗದವನ್ನು ಓದಿಕೊಂಡು ಕಾಲವಕಳೆಯಿರೋ

ಕಾಮಕ್ರೋಧ ಬಿಡಿರೆಂಬೋ ಕಾಗದ ಬಂದಿದೆ
ನೇಮ ನಿಷ್ಠೆಯೋಳಿರೆಂಬೋ ಕಾಗದ ಬಂದಿದೆ

ತಾಮಸ ಜನರ ಕೂಡದಿರೆಂಬೋ ಕಾಗದ ಬಂದಿದೆ
ನಮ್ಮ ಕಾಮನಯ್ಯನು ತಾನೇ ಬರೆದ ಕಾಗದ ಬಂದಿದೆ

ಹೆಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ಹೊನ್ನಿನಾಸೆ ಬಿಡಿರೆಂಬೊ ಕಾಗದ ಬಂದಿದೆ

ಮಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ನಮ್ಮ ಕಮಲನಾಭನು ತಾನೇ ಬರೆದ ಕಾಗದ ಬಂದಿದೆ

ಗೆಜ್ಜೆ ಕಾಲಿಗೆ ಕಟ್ಟಿರೆಂಬೋ ಕಾಗದ ಬಂದಿದೆ
ಹೆಜ್ಜೆ ಹೆಜ್ಜೆಗೆ ಹರಿ ಎನ್ನಿರೆಂಬೊ ಕಾಗದ ಬಂದಿದೆ

ಲಜ್ಜಾ ಬಿಟ್ಟು ಕುಣಿಯಿರೆಂಬೋ ಕಾಗದ ಬಂದಿದೆ
ನಮ್ಮ **ಪುರಂದರ ವಿಠಲ** ತಾನೇ ಬರೆದ ಕಾಗದ ಬಂದಿದೆ

-------------

***ಮಧ್ವಮತದ ಸಿಧ್ಧಾಂತದ ಪದ್ಧತಿ ಬಿಡಬ್ಯಾಡಿ***
ಬಿಡಬ್ಯಾಡಿ, ಬಿಟ್ಟು ಕೆಡಬ್ಯಾಡಿ ಕೆಡಬ್ಯಾಡಿ

ಹರಿಸರ್ವೋತ್ತಮನಹುದೇಂಬೋ ಜ್ಞಾನವ
ತಾರತಮ್ಯದಿಂದ ತಿಳಿಸೋ ಮಾರ್ಗವ

ಘೋರ ಯಮನ ಭಯ ದೂರ ಓಡಿಸಿ
ಮುರಾರಿಯ ಚರಣವ ತೋರೋ ಮಾರ್ಗವ

ಭಾರತೀಶ ಮುಖ್ಯಪ್ರಾಣಾಂತರ್ಗತ
ನೀರಜಾಕ್ಷ ನಮ್ಮ **ಪುರಂದರ ವಿಠಲನ**

-------------

**ತಟಿತ್ ಕೋಟಿ ನಿಭ ಕಾಯೋ ಜಗನ್ನಾಥ ।**
ವಿಠಲಯ್ಯ ವಿಠಲಯ್ಯ ॥
ಭಜಿಸುವೆ ನಿನ್ನನು । ಅಜಭವ ಸುರನುತ ।
ಭಜನ ಕಾಮತರ । ಕುಜನ ಕುಠಾರ ॥

ನೀ ಕರುಣಿಸದೆ ನಿರಾಕರಿಸಲು ಎನ್ನ ।
ಸಾಕುವರಾರು ದಯಾಸರ ಮೂರುತಿ ॥
ಶರಣಾಗತರನು ಪೊರೆವೆನೆಂಬ ತವ ।
ಬಿರುದು ಕಾಯೋ ಕರಿವರದ ಜಗನ್ನಾಥ ॥

--------

**ಎನಗು ಆಣೆ । ರಂಗ । ನಿನಗು ಆಣೆ**

ಎನಗು ನಿನಗು ಇಬ್ಬರಿಗೂ ಭಕ್ತರ ಆಣೆ ॥ ಪ ॥

ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ । ರಂಗ ॥
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ ॥ ೧ ॥

ತನುಮನಧನದಲಿ ವಂಚಕನಾದರೆ ಎನಗೆ ಆಣೆ । ರಂಗ ॥
ಮನಸು ನಿನ್ನಲಿ ನಿಲ್ಲಿಸದಿದ್ದರೆ ನಿನಗೆ ಆಣೆ ॥ ೨ ॥

ಕಾಕು ಮನುಜರ ಸಂಗ ಮಾಡಿದರೆ ಎನಗೆ ಆಣೆ । ರಂಗ ॥
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ॥ ೩ ॥

ಶಿಷ್ಟರ ಸಂಗ ಮಾಡದಿದ್ದರೆ ಎನಗೆ ಆಣೆ । ರಂಗ ॥
ದುಷ್ಟರ ಸಂಗ ಬಿಡಿಸದಿದ್ದರೆ ನಿನಗೆ ಆಣೆ ॥ ೪ ॥

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ । ರಂಗ ॥
**ಪುರಂದರವಿಠಲ** ನೀನೊಲಿಯದಿದ್ದರೆ ನಿನಗೆ ಆಣೆ ॥೫ ॥

------------

**ಕಂಗಳಿದ್ಯಾತಕೋ ಕಾವೇರಿರಂಗನ ನೋಡದ**

ಜಗಂಗಳೊಳಗೆ ಮಂಗಳಮೂರುತಿ
ರಂಗನ ಶ್ರೀಪಾದಂಗಳ ನೋಡದ ॥

ಎಂದಿಗಾದರೊಮ್ಮೆ ಜನರು
ಬಂದು ಭೂಮಿಯಲ್ಲಿ ನಿಂದು
ಚಂದ್ರಪುಷ್ಕರಣಿ ಸ್ನಾನವ ಮಾಡಿ
ಆನಂದದಿಂದಲಿ ರಂಗನ ಕಾಣದ ॥

ಹರಿಪಾದೋದಕ-ಸಮ ಕಾವೇರಿ
ವಿರಜಾನದೀಲಿ ಸ್ನಾನವ ಮಾಡಿ
ಪರಮ ವೈಕುಂಠ ರಂಗಮಂದಿರ
ಪರ ವಾಸುದೇವನ ನೋಡದ ॥

ಹಾರ ಹೀರ ವೈಜಯಂತಿ
ತೋರ ಮುತ್ತಿನ ಹಾರ ಪದಕ
ತೇರನೇರಿ ಬೀದಿಲಿ ಬರುವ
**ರಂಗವಿಠಲ**ರಾಯನ ನೋಡದ ॥

--------

***ಕೇಳನೋ ಹರಿ ತಾಳನೋ***

ತಾಳ ಮೇಳಗಳಿದ್ದು
ಪ್ರೇಮವಿಲ್ಲದ ಗಾಯನ

ತಂಬೂರಿ ಮೊದಲಾದ
ಅಖಿಲ ವಾದ್ಯಗಳಿದ್ದು
ತುಂಬು ಕೊಳಲ ಧ್ವನಿ ಸಾರವಿದ್ದು
ತುಂಬುರ ನಾರದರ ಗಾನ ಕೇಳುವ ಹರಿ
ನಂಬಲಾರ ಈ ಢಂಬದ ಕೂಗಾಟ

ನಾನಾ ಬಗೆಯ ಭಾವ ರಾಗ
ತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿ ಇದ್ದು
ಗಾನವಾರಿಯ ದಿವ್ಯನಾಮರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು

ಅಡಿಗಡಿಗೆ ಆನಂದ ಭಾಷ್ಪ ಪುಳಕದಿಂದ
ನುಡಿ ನುಡಿಗೂ ಶ್ರೀ ಹರಿ ಎನ್ನುತ್ತ
ಧೃಡ ಭಕ್ತರನು ಕೂಡಿ
ಹರಿ ಕೀರ್ತನೆ ಮಾಡಿ
ಕಡೆಗೆ ಪುರಂದರ ವಿಠಲನೆಂದರೆ ಕೇಳ್ವ

--------------

**ನಾ ನಿನ್ನ ಧ್ಯಾನದೊಳು ಇರಲು**
ಸದಾ ಮಿಕ್ಕ
ಮಾನವರೇನು ಮಾಡುವರೋ ಗೋಪಾಲ

ಮತ್ಸರಿಸದರೇನು ಮಾಡಲಾಗರು ಎನ್ನ
ಅಚ್ಯುತ ನಿನ್ನಯ ಕೃಪೆ ಇರಲು
ನಿತ್ಯವು ನಿನ್ನಯ ನಾಮವ ಜಪಿಸಲು
ಕಿಚ್ಚಿಗೆ ಇರುವೆ ಮುತ್ತುವವೇ ರಂಗ

ಗಾಳಿಲಿ ಕುದುರೆ ವೈಯಾರದಿ ತಿರುಗಲು
ಧೂಳದು ರವಿಗೆ ತಾ ಮುಸುಕುವದೇ
ತಾಳಿದವರಿಗೆ ವಿರುದ್ಧ ಲೋಕದೊಳುಂಟೆ
ಗಾಳಿಗೆ ಗಿರಿ ನಡಗುವದೇ ಹೇಳೆಲೋ ರಂಗ

ಕನ್ನಡಿಯೊಳಗಣ ಗಂಟು ಕಂಡು ಕಳ್ಳ
ಕನ್ನವಿಕ್ಕಲು ಅವನ ವಶವಹುದೇ
ನ್ನಾ ನಂಬಿದೆ ನೀ ಎನ್ನ ಸಲಹ ಬೇಕೋ
ಪನ್ನಗ ಶಯನ ಶ್ರೀ **ಪುರಂದರವಿಠಲ**

----------

**ಶದಾ ಎನ್ನ ಹೃದಯದಲ್ಲಿ**

ವಾಸ ಮಾಡು ಶ್ರೀ ಹರಿ

ಜ್ನ್ಯಾನವೆಂಬೊ ನವರತ್ನದ ಮಂಟಪದ
ಮಧ್ಯದಲ್ಲಿ ವೇಣುಲೋಲನ ಕುಳ್ಳಿರಿಸಿ
ಧ್ಯಾನದಿಂದ ಭಜಿಸುವೆ ॥

ಭಕ್ತಿ ರಸವೆಂಬೊ ಮುತ್ತು ಮಾಣಿಕ್ಯದ
ಹರಿವಾಣದಿ ಮುಕ್ತನಾಗ ಬೇಕು ಎಂದು
ಮುತ್ತಿನಾರತಿ ಎತ್ತುವೆ ॥

ನಿನ್ನ ನಾನು ಬಿಡೆವೆನಲ್ಲ
ಎನ್ನ ನೀನು ಬಿಡಲು ಸಲ್ಲ
ಘನ್ನ ಮಹಿಮ **ವಿಜಯವಿಠಲ**
ನಿನ್ನ ಭಕುತರ ಕೇಳೊ ಸೊಲ್ಲ

----------

**ಅಂಬಿಗ ನಾ ನಿನ್ನ ನಂಬಿದೆ ॥**

ಜಗದಂಬಾರಮಣ ನಾ ನಂಬಿದೆ

ತುಂಬಿದ ಹರಿಗೋಲಂಬಿಗ ।
ಅದಕ್ಕೊಂಬತ್ತು ಛಿದ್ರಗಳಂಬಿಗ ।
ಸಂಭ್ರಮದಲಿ ನೀನಂಬಿಗ ।
ಅದರಿಂಬು ತಿಳಿಯದು ನಡಿಸಂಬಿಗ ॥

ಹತ್ತು ಬೊಬ್ಬಳಿಗಳು ಅಂಬಿಗ ।
ಅದಕ್ಕೆ ಮತ್ತೈದು ಮುತ್ತಿವೆ ಅಂಬಿಗ ।
ಮತ್ತಿಗೊಳಗಾದೆನಂಬಿಗ ।
ಎನ್ನನೆತ್ತಿಕೊಂಡೊಯ್ಯೋ ನೀನಂಬಿಗ ॥

ಆರು ತೆರೆಯ ನೋಡಂಬಿಗ ।
ಹದ ಮೀರಿಬರುತಲಿದೆ ಅಂಬಿಗ ।
ಯಾರಿಂದಲಾಗದು ಅಂಬಿಗ ।
ಅದನಿವಾರಿಸಿ ದಾಟಿಸೋ ಅಂಬಿಗ ॥

ಹೊಳೆಯ ಭರವ ನೋಡಂಬಿಗ ।
ಅದರ ಸೆಳವು ನೋಡು ಘನವಂಬಿಗ ।
ಸುಳಿಯೊಳು ಮುಳುಗುವೆ ಅಂಬಿಗ ।
ಯೆನ್ನ । ಸೆಳದುಕೊಂಡೊಯ್ಯೊ ನಿನಂಬಿಗ ॥

ಸತ್ಯವೆಂಬುದೆ ಹುಟ್ಟಂಬಿಗ ।
ಸದಾ ಭಕ್ತಿ ಎಂಬುದೆ ಪಥವಂಬಿಗ ।
ನಿತ್ಯ ಮೂರುತಿ **ಪುರಂದರ ವಿಠಲಾ** ।
ನಮ್ಮನು ಮುಕ್ತಿಮಂಟಪಕೊಯ್ಯೊ ಅಂಬಿಗ ॥

------

**ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜಾನಪಾಲ**

ಗಾನಲೋಲ ಶ್ರೀಮುಕುಂದನೇ ।ಪ್।
ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಸುವ
ವೇಣುಗೋಪಾಲ ಗೋವಿಂದ ವೇದ್ಯ ವೇದ್ಯ ನಿತ್ಯಾನಂದ ।ಅ।

ಎಷ್ಟು ದಿನ ಕಷ್ಟಪಡುವುದೋ ಯಶೋದೆ ಕಂದ
ದೃಷ್ಟಿಯಿಂದ ನೋಡಲಾಗದೇ ।
ಮುಟ್ಟಿ ನಿನ್ನ ಭಜಿಸಲಾರೇ ಕೆಟ್ಟ ನರಜನ್ಮದವ
ದುಷ್ಟ ಕಾರ್ಯ ಮಾಡಿದಾಗ್ಯೂ ಶಿಷ್ಟನಾಗಿ ಕೈಯ ಪಿಡಿಯೋ ।೧।

ಎಂದಿಗೇ ನಿನ್ನಾ ಪಾದಾಬ್ಜವ
ಪೊಂದುವ ಸುಖ ಲಭ್ಯವೋ ಮಾಧವಾ ।
ಅಂಧಕಾರಣ್ಯದಲಿ ನಿಂದು ತತ್ತರಿಸುತಿಹೇನೋ
ಅಂಧದಿಂ ಭವಾಬ್ಧಿಯೋಳು ನಿಂದು ನೊಂದೆನೋ ಗೋವಿಂದಾ ।೨।

ಅನುದಿನ ಅನೇಕ ರೋಗಗಳಾ ಅನುಭವಿಸಿದೆನೋ
ಘನ ಮಹಿಮನೇ ಕೇಳಯ್ಯ ।
ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರದಿ ಸಲಹೋ ಯೆನ್ನ
ಹನುಮಧೀಶ ಪುರಂದರ ವಿಠ್ಠಲನೇ ಕೈಯ ಪಿಡಿದು ।೩।

------

***ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ***

ನಿನ್ನ ನೋಡಿ ಧನ್ಯನಾದೆ ಎನ್ನ ಮನೋನಯನಕೀಗ
ಇನ್ನು ದಯಮಾಡು ಸುಪ್ರಸನ್ನ ಸ್ವಾಮಿ ಪಾಂಡುರಂಗ ।

ಪಕ್ಷೀ ವಾಹನ ಲಕ್ಷ್ಮೀರಮಣ
ಲಕ್ಷ್ಮೀ ನಿನ್ನ ವಕ್ಷದಲ್ಲಿ
ರಕ್ಷ ಶಿಕ್ಷಣ ದಕ್ಷ ಪಾಂಡವ
ಪಕ್ಷ ರಕ್ಷ ಕಮಲಾಕ್ಷ ।೧।

ದೇಶ ದೇಶ ತಿರುಗಿ ನಾನು
ಆಶಬದ್ಧನಾದೆ ಸ್ವಾಮಿ
ದಾಸನು ನಾನಲ್ಲವೆ ಜಗ
ದೀಶ ಶ್ರೀಶ ಶ್ರೀನಿವಾಸ ।೨।

ಕಂತು ಜನಕ ಕೇಳೋ ನೀ

ನಿರಂತರದಿ ನಿನ್ನ ಸೇವೆ
ಅಂತರಂಗದಿ ಪಾಲಿಸಯ್ಯ
ಹೊಂತಕಾರಿ **ಪುರಂದರ** ವಿಠಲ ।೩।

--------

**ನಾನೇನು ಮಾಡಿದೆನು ವೆಂಕಟರಾಯ**
ನೀನೆನ್ನ ಕಾಯಬೇಕೋ ।ಪ।

ಮಾನಾಪಮಾನವು ನಿನ್ನದು ಎನಗೇನು
ದೀನರಕ್ಷಕ ತಿರುಪತಿಯ ವೆಂಕಟರಾಯ ।ಅ।

ರಕ್ಕಸನಲ್ಲವೇನೋ ಪ್ರಹ್ಲಾದನು
ಚಿಕ್ಕವ ಧ್ರುವನಲ್ಲವೆ
ಉಕ್ಕಿ ಬರುವ ಕರ್ಮ ಮಾಡಿದಜಮಿಳ ನಿಮ್ಮ
ಅಕ್ಕನ ಮಗನೇನೋ ವೆಂಕಟರಾಯ ।೧।

ಕರಿರಾಜ ಕರೆಸಿದನೆ ದ್ರೌಪದಾದೇವಿ
ಬರೆದೋಲೆ ಕಳುಹಿದಳೆ
ವರಋಷಿಪತ್ನಿ ಕಲ್ಲಾಗಿ ಸ್ತ್ರೀಯಾದದ್ದು
ಧರೆಯೆಲ್ಲ ಅರಿಯದೇನೋ ವೆಂಕಟರಾಯ ।೨।

ಒಪ್ಪಿಡಿಯವಲಕ್ಕಿಯ ತಂದವನಿಗೆ
ಒಪ್ಪಿ ಕೊಟ್ಟೆಯೊ ಭಾಗ್ಯವ
ಸರ್ಪಶಯನ ಶ್ರೀ **ಪುರಂದರವಿಠಲ**
ಅಪ್ರಮೇಯನೆ ಸಲಹೋ ವೆಂಕಟರಾಯ ।೩।

--------

**ವೆಂಕಟರಮಣ ವೇದಾಂತ ನಿನ್ನಯ ಪಾದ ಪಂಕಜ**
ಕಂಡ ಮೇಲೆ ಮಂಕು ಮಾನವರ ಬೇಡಿಸಿವುದು
ಉಚಿತವೆ ಶಂಖ ಚಕ್ರಾಂಕಿತನೆ ।ಪ।

ಕ್ಷೀರಸಾಗರವ ಪೊಂದಿರ್ದವ ಮಥಿಸಿದ
ನೀರಮಜ್ಜಿಗೆ ಕಾಣನೆ ಚಾರುಕಲ್ಪವೃಕ್ಷದಡಿಯೊಳು
ಕುಳಿತಿರ್ದು ಘೋರತಿಂತ್ರಿಣಿ ಬಯಕೆಯೇ ।೧।

ಸಾರ ಭೂಪಾಲನ ಸೂನುವೆನಿಸಿಕೊಂಡು
ಸೂರೆಗೊಳಿನ ತಿರುಕೇ
ನಾರಿ ಲಕ್ಷ್ಮೀಕಾಂತ ನಿನ್ನ ಪೊಂದಿರ್ದಗೆ
ದಾರಿದ್ರ್ಯದಟ್ಟುಳಿಯೇ ।೨।

ಸುರನದಿಯೊಳು ಮಿಂದು ಸುಖಿಯಾದ
ಬಳಿಕಿನ್ನು ದುರಿತಗಳಟ್ಟುಳಿಯೇ
ಪರಮಪುರುಷ ನಿನ್ನ ಪೊಂದಿದ್ದ ದಾಸರ್ಗೆ
ಅರಿಗಳ ಭೀತಿಯುಂಟೆ ।೩।

ಗರುಡನ ಮಂತ್ರವ ಕಲಿತು ಜಪಿಸುವಗೆ
ಉರಗನ ಹಾವಳಿಯೇ
ಹರಿಪಕ್ಕದೊಳು ಮನೆ ಕಟ್ಟಿದ ನರನಿಗೇ
ಕರಿಗಳ ಭೀತಿಯುಂಟೇ ।೪।

ಪರಮಪುರುಷ ಸುಗುಣಾತ್ಮಕನೆ
ನಿನ್ನ ಮೊರೆಹೊಕ್ಕೆನಯ್ಯಾ ಕಾಯೋ
ಉರಗಾದ್ರಿವಾಸ ಶ್ರೀ ಪುರಂದರವಿಠ್ಠಲ
ಪರಬ್ರಹ್ಮ ನಾರಾಯಣ ।೫।
-------

**ತರಳೆ ರನ್ನೆ ಕಪ್ಪು ಮೈಯವ ಯಾತರ ಚಲುವಾನೇ**
ಕರಿಯ ಜಟೆಯ ಜೋಗಿಗಿಂತ ಉತ್ತಮನಲವೇನೆ

ಜಲಧಿಯೋಳು ವಾಸವೇನೆ ಮನೆಗಾಳಿಲ್ಲವೆ
ಲಲನೆ ಕೇಳು ಕಾಡಿಗಿಂತ ಲೇಸು ಅಲ್ಲವೇ

ಮಂಥರ ಗಿರಿಯ ಪೊತ್ತಿಪುದು ಎನು ಚಂದವೇ
ಕಂದನ ಒಯ್ದು ಅಡವಿಯಲ್ಲಿಡುವುದು ಯಾವ ನ್ಯಾಯವೇ
ಮಣ್ಣನು ಅಗೆದು ಬೇರನು ಮೆಲುವುದು ಏನು ಸ್ವಾದವೇ
ತನ್ನ ಕೈಯಲ್ಲಿ ಕಪಾಲ ಪಿಡಿವುದು ಯಾವ ನ್ಯಾಯವೇ

ಮುತ್ತಿನ ಹಾರ ಇರಲು ಕರುಳ ಮಾಲೆಯ ಧರಿಸುವರೇ
ನಿತ್ಯ ರುಂಡ ಮಾಲೆ ಧರಿಸೊದು ಯಾವ ನ್ಯಾಯವೇ

ಗಿಡ್ಡನಾಗಿ ಬೆಳದು ಅಳೆವುದು ಏನು ನ್ಯಾಯವೇ
ಗುಡ್ಡದ ಮಗಳ ತಂದೆಗೆ ಮುನಿಯೋದ್ಯಾವ ನ್ಯಾಯವೇ

ಪಿತನ ಮಾತ ಕೇಳಿ ಮಾತೆಯ ಶಿರವಾನಳಿವಾರೇ
ಶಿತಿ ಕಂಠನಾಗಿ ಇರುವೋದ್ಯಾವ ನ್ಯಾಯವೇ

ಕೋಡಗ ಕರಡಿ ಕಪಿಗಳ ಹಿಂಡು ಬಂಧು ಬಳಗವೇ
ಕೂಡಿ ಬಂದ ಭೂತ ಬಳಗ ಜ್ಞಾತಿ ಸಂಬನ್ಧವೇ

ನ್ಹಾವಿನ ಹೆಡೆಯ ತುಳಿವಾರೇನೇ ಅಂಜಿಕಿಲ್ಲವೇ
ಹಾವೇ ಮಯ್ಯಿಗೆ ಸುತ್ತಿ ಇರಲು ಹ್ಯಾಂಗೆ ಜೀವಿಪನೇ

ಬತ್ತಲಾಗಿ ಇರವನೇನು ಅವಗೆ ನಾಚಿಕಿಲ್ಲವೇ
ಸತ್ತ ಗಜದ ಚರ್ಮ ಹೊದೆಯಲು ಹೇಸಿಕಿಲ್ಲವೇ

ಉತ್ತಮ ತೇಜಿ ಇರಲು ಧರೆಯೊಳು ಹದ್ದನು ಏರ್ವರೇ

ಎತ್ತಿನ ಬೆನ್ನು ಏರಿದವರು ಬುದ್ಧಿವಂತರೇ

ಹರಿ ಹರರಿಗೆ ಸಾಮ್ಯವೇನೆ ಹೇಳೆ ರುಕ್ಮಿಣೀ ?
**ಪುರಂದರವಿಠಲ** ಸರ್ವೋತ್ತಮ ಕೇಳೆ ಭವಾನಿ.

---------

**ನೆರೆ ನಂಬಿದೆ ಮದ್ಹೃದಯ ಮಂಟಪದೊಳು ।**
ಪರಿಶೋಭಿಸುತಿರೋ ಪಾಂಡುರಂಗ ।
ಶರಣ ಜನರ ಸಂಸಾರ ಮಹಾಭಯ ।
ಹರಣ ಕರುಣ ಸಿರಿ ಪಾಂಡುರಂಗ ॥

ನೆರೆದಿಹ ಬಹು ಜನರೊಳಿದ್ದರು ಮನ ।
ಸ್ಥಿರವಿಡು ನಿನ್ನಲಿ ಪಾಂಡುರಂಗ ॥
ಪರಿಪರಿ ಕೆಲಸವು ನಿನ್ನ ಮಹಾಪೂಜೆ ।
ನಿರುತ ಎನಗೆ ಕೊಡೋ ಪಾಂಡುರಂಗ ॥

ಪರದೇವನೆ ನಿನ್ನ ಲೀಲಾಸ್ಮೃತಿಯನು
ನಿರುತವೆನಗೆ ಕೊಡು ಪಾಂಡುರಂಗ ।
ಪರರಾಪೇಕ್ಷೆಯ ಬಿಡಿಸಿ ನಿರಂತರ ।
ಪರಗತಿಪಥ ತೋರೋ ಪಾಂಡುರಂಗ ॥

ಸುಖವಾಗಲಿ ಬಹುದುಃಖವಾಗಲಿ
ಸಖ ನೀನಾಗಿರು ಪಾಂಡುರಂಗ ।
ನಿಖಿಲಾಂತರ್ಗತ **ವ್ಯಾಸವಿಠಲ** ತವ ।
ಮುಖ ಪಂಕಜ ತೋರೋ ಪಾಂಡುರಂಗ ॥

-----------

*ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ*
ಸಂಗಸುಖವನಿತ್ತು ಕಾಯೊ ಕರುಣಸಾಗರ ।ಪ।

ಅರಿಯರೋ ನೀನಲ್ಲದೆ ಮತ್ತನ್ಯದೈವರ
ತೊರೆಯರೋ ನಿನ್ನಂಘ್ರಿಸೇವೆ ಪ್ರತಿವಾಸರ
ಮರೆಯರೋ ನೀ ಮಾಡಿದಾನಿಮಿತ್ತೋಪಕಾರ
ಬೆರೆಯರೋ ಪರತತ್ವವಲ್ಲದೆ ಇತರ ವಿಚಾರ ।೧।

ಮೂಕ ಬಧಿರರಂತಿಪ್ಪರೊ ನೋಳ್ಪಜನಕೆ
ಕಾಕುಯುಕುತಿಗಳ ತಾರರೊ ಮನಕೆ
ಸ್ವೀಕರಿಸರರ್ಪಿತ ಒಂದು ಕಾಲಕೆ
ಆ ಕೈವಲ್ಯಭೋಗಸುಖ ಅವರಿಗೆ ಬೇಕೆ ।೨।

ಜಯಾಜಯ ಲಾಭಾಲಾಭ ಮಾನಪಮಾನ
ಭಯಾಭಯ ಸುಖದುಃಖ ಲೋಷ್ಟ ಕಾಂಚನ
ಪ್ರಿಯಾಪ್ರಿಯ ನಿಂದಾಸ್ತುತಿಗಳನುದಿನ
ಶ್ರೀಯರಸ ಚಿಂತಿಸುವರೋ ನಿನ್ನ ಆದೀನ ।೩।

ಈಶಿತವ್ಯರೆಂಬೋರೆ ಏಕಾಂತಭಕ್ತರು
ದೇಶ್ಕಾಲೋಚಿತ ಧರ್ಮಕರ್ಮಾಸಕ್ತರು
ಆಶಾ ಕ್ರೋಧ ಲೋಭ ಮೋಹಪಾಶ ಮುಕ್ತರು
ಈ ಸುಜನರೆ ಶಾಪಾನುಗ್ರಹಶಕ್ತರು ।೪।

ಕಂಡಕಂಡಲ್ಲಿ ವಿಶ್ವರೂಪ ಕಾಂಬೋರು
ಉಂಡು ಉಣಿಸಿದ್ದು ನಿನ್ನ ಯಜ್ಞವೆಂಬೋರು
ಬಂಡುಣಿಯಂದದಿ ನಾಮಾಮೃತವ ಸವಿಯರು
ಹೆಂಡರು ಮಕ್ಕಳು ನಿನ್ನ ದಾಸರೆಂಭೋರು ।೫।

ಬಿಡರು ತಮ್ಮ ಸ್ವಧರ್ಮಗಳೇನು ಬಂದರು
ಬಡರು ದೈನ್ಯ ಒಬ್ಬರಿಗು ಲೋಕವಂದ್ಯರು
ಪಿಡಿಯರೋ ನಿನ್ನ ದ್ವೇಷಿಗಳಿಂದೇನು ಬಂದರು
ಕೊಡುವರು ಬೇಡಿದಿಷ್ಟಾರ್ಥ ನಿತ್ಯಾನಂದರು ।೬।

ನಗುವರೊ ರೋದಿಸುವರು ನಾಟ್ಯವಾಡೋರು
ಬಗೆಯರೊ ಬಡತನ ಭಾಗ್ಯ ಭಾಗವತರು
ತೆಗೆಯರೊ ನಿನ್ನಲ್ಲಿ ಮನ ಒಮ್ಮೆಗಾದರು
ಜಗನಾಥವಿಠಲ ನಿನ್ನವರೇನುಧನ್ಯರೊ ।೭।

------

*ತೂಗುವೆ ರಂಗನ ತೂಗುವೆ ಕೃಷ್ಣನ ತೂಗಿ ಜೋ ಜೋ*
ಹಾಡುವೆ ।ಪ।

ಮೇಲುಕೋಟೆ ಸ್ವಾಮಿ ಚೆಲುವರಾಯನಾ।
ಬೇಲೂರ ಶ್ರೀ ಚನ್ನ ಕೇಶವನಾ।
ಉಡುಪಿಯಲಿ ನಿಂದುರವ ಶ್ರೀ ಕೃಷ್ಣನಾ ।
ಶ್ರೀ ರಂಗಧಾಮದಿ ಮಲಗಿದವನಾ ।೧।

ಕಣ್ಣಲ್ಲೆ ಹುಣ್ಣಿಮೆ ತಂದವನಾ।
ನಗುವಲ್ಲೆ ಮಲ್ಲಿಗೆಯ ನಾಚಿಸುವನಾ ।
ಚೆಲುವಲ್ಲೆ ತಾವರೆಯ ಮೀರೀಸುವನಾ।
ಈ ಮನೆಯ ಬೆಳಕಾಗಿ ಬಂದವನಾ ।೨।

ಆಲದೆಲೆಯ ಮೇಲೆ ಮಲಗಿದವನಾ।
ಹತ್ತವತಾರದ ಪರಮಾತ್ಮನಾ ।
ಮತ್ತೆ ನಮಗಾಗಿಳೆಗೆ ಬಂದವನಾ।
ಜಗವೆಲ್ಲಾ ತೂಗುವಾ ಜಗಧೀಶನಾ ।೩।

----------

**ಮಂಗಳಂ**

**ಜಯ ಮಂಗಳಂ ನಿತ್ಯ ಶುಭ ಮಂಗಳಂ ।**

ತೊಳಸದಕ್ಕಿಯ ತಿಂಬ ಕಿಲಬುತಣಿಗೆಯ ಉಂಬ ।
ಕೊಳಗದಲಿ ಹಣಗಳನು ಅಳೆಸಿಕೊಂಬ ।
ಇಲ್ಲ ಕಾಸು ಎಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸಕೊಂಬ ಕಳ್ಳದೊರೆಗೆ ॥ ೧ ॥

ತನ್ನ ನೋಡೇನೆಂದು ಮುನ್ನೂರಗಾವುದ ಬರೆ ।
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ ।
ಹೊನ್ನುಹಣಗಳ ಕಸಿದು ತನ್ನ ದರುಶನ ಕೊಡದೆ ।
ಬೆನ್ನೊಡೆಯ ಹೊಯ್ಯುವ ಅನ್ಯಾಯಕಾರಿಗೆ ॥ ೨ ॥

ಗಿಡ್ಡಹಾರುವನಾಗಿ ಬಡ್ಡಿದಾನವ ಬೇಡಿ ।
ದುಡ್ಡುಕಾಸುಗಳಿಗೆ ಕೈಯನೀಡಿ ।
ಅಡ್ಡಬಿದ್ದ ಜನರ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ **ಶ್ರೀವಿಜಯವಿಶಲಗೆ** ॥ ೩ ॥

----------

**ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ**
ಪ್ರಕ್ಷಯಂ ಯಾಂತಿ ದುಃಖಾನಿಯನ್ನಾಮತಃ ।
ಅಕ್ಷರೋ ಯೋಜರಃ ಸರ್ವದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಮ್
ಪ್ರೀಣಯಾಮೋ ವಾಸುದೇವಂ
ದೇವತಾ ಮಂಡಲಾ ಖಂಡ ಮಂಡನಮ್ ।

ನಂದಿತೀರ್ಥೋರುಸನ್ನಾಮಿನೋ ನಂದಿನಃ
ಸಂಧದಾನಃ ಸದಾನಂದ ದೇವೇ ಮತಿಮ್ ।
ಮಂದಹಾಸಾರುಣಾ ಪಾಂಗದತ್ತೋನ್ನತಿಂ
ನಂದಿತಾಶೇಷ ದೇವಾದಿವೃಂದಂ ಸದಾ ॥
ಪ್ರೀಣಯಾಮೋ ವಾಸುದೇವಂ

ದೇವತಾ ಮಂಡಲಾ ಖಂಡ ಮಂಡನಮ್ ।

--------

**ಹಯವದನ ತನ್ನ ಪ್ರೀಯಳಾದ ಲಕ್ಷುಮಿಗೆ**
ಜಯವಿತ್ತ ಕ್ಷಿರಾಂಬುಧಿಯಲ್ಲಿ
ಜಯವಿತ್ತ ಕ್ಷಿರಾಂಬುಧಿಯಲ್ಲಿ ಶ್ರೀ ಕೃಷ್ಣ
ದಯದಿ ನಮ್ಮೆಲ್ಲರಾ ಸಲಹಲಿ । ಶೋಭಾನೆ ।

ಶೋಭಾನವೆನ್ನಿರೆ ಸುರರೊಳು ಸುಭಗನಿಗೆ
ಶೋಭಾನವೆನ್ನಿ ಸುಗುಣನಿಗೆ
ಶೋಭಾನವೆನ್ನಿರೆ ತ್ರಿವಿಕ್ರಮರಾಯಗೆ
ಶೋಭಾನವೆನ್ನಿ ಸುರಪ್ರೀಯಗೆ । ಶೋಭಾನೆ ।

ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ
ಪಕ್ಷಿವಾಹನ ಗೆರಗುವೆ
ಪಕ್ಷಿವಾಹನ ಗೆರಗುವೆ ಅನುದಿನ
ರಕ್ಷಿಸಲಿ ನಮ್ಮ ವಧುವರರ । ಶೋಭಾನೆ ।

--------------

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।

ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥